ಗಂಗಾಕಲ್ಯಾಣ ಯೋಜನೆಯ ಕೊಳವೆ ಬಾವಿಗಳ ವಿದ್ಯುಧ್ಧೀಕರಣ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 239 (1616)

ಸದಸ್ಯರ ಹೆಸರು : ಶ್ರೀ.ಶಿವರಾಮ ಬಿ.(ಗಂಡಸಿ)

ವಿಷಯ : ಗಂಗಾಕಲ್ಯಾಣ ಯೋಜನೆಯ ಕೊಳವೆ ಬಾವಿಗಳ ವಿದ್ಯುಧ್ಧೀಕರಣ

ಸಚಿವರ ಹೆಸರು ಮತ್ತು ಪದನಾಮ : ಶ್ರೀ.ಬಾಲಚಂದ್ರ.ಲ.ಜಾರಕಿಯಹೋಳಿ (ಸಮಾಜ ಕಲ್ಯಾಣ ಸಚಿವರು)

1. ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆಯ ಕೊಳವೆ ಬಾವಿಗಳಿಗೆ ವಿದ್ಯುದೀಕರಣದ ವ್ಯವಸ್ಥೆಯನ್ನು ಪೂರ್ಣವಾಗಿ ಒದಗಿಸುವ ಬಾಕಿ ಇರುವ ಫಲಾನುಭವಿಗಳ ಸಂಖ್ಯೆ ಎಷ್ಟು (ವರ್ಷಾವಾರು ಮತ್ತು ಜಿಲ್ಲಾವಾರು ಮಾಹಿತಿ ಒದಗಿಸುವುದು)

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯ ಸಾಮೂಹಿಕ ಹಾಗೂ ವೈಯಕ್ತಿಕ ನೀರಾವರಿ ಯೋಜನೆಯಲ್ಲಿ ಪ್ರಾರಂಭದಿಂದ ಕೊರೆಯಲಾದ ಕೊಳವೆ ಬಾವಿಗಳು ಹಾಗೂ ವಿದ್ಯುಧ್ಧೀಕರಣಗೊಂಡ ಮತ್ತು ವಿದ್ಯುಧ್ಧೀಕರಣಕ್ಕೆ ಬಾಕಿ ಇರುವ ಕೊಳವೆ ಬಾವಿಗಳ ವಿವರ ಈ ಕೆಳಕಂಡಂತಿದೆ..

ಯೋಜನೆ	ಕೊರೆದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕ ಹೊಂದಿದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕಕ್ಕೆ ಬಾಕಿ ಉಳಿದಿರುವ ಕೊಳವೆ ಬಾವಿಗಳು
ಸಾಮೂಹಿಕ	2220	1556	664
ವೈಯಕ್ತಿಕ	3727	963	2764

ವಿದ್ಯುತ್ ಸಂಪರ್ಕಕ್ಕೆ ಬಾಕಿ ಉಳಿದಿರುವ ಕೊಳವೆ ಬಾವಿಗಳ ಜಿಲ್ಲಾವಾರು ಮತ್ತು ವರ್ಷಾವಾರು ಮಾಹಿತಿಯನ್ನು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ನಿಯಮಿತ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿಗಳಿಗೆ ವಿದ್ಯುದ್ಧೀಕರಣಗೊಳಿಸದೇ ಬಾಕಿ ಇರುವ ಫಲಾನುಭವಿಗಳ ವರ್ಷವಾರು ಮತ್ತು ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ

ಗಂಗಾ ಕಲ್ಯಾಣ ಯೋಜನೆಯಡಿ ಪ್ರಾರಂಭದಿಂದ ದಿ:28.02.2007ರ ಅಂತ್ಯದವರೆಗೆ ಕೊಳವೆ ಬಾವಿ ಕೊರೆದು, ವಿದ್ಯುದ್ಧೀಕರಣಕ್ಕೆ ಬಾಕಿ ಇರುವ ಕೊಳವೆಬಾವಿಗಳ ವಿವರ ಈ ಕೆಳಕಂಡಂತಿದೆ.

ವೈಯಕ್ತಿಕ ನೀರಾವರಿ ಕೊಳವೆ ಬಾವಿಗಳ ಸಂಖ್ಯೆ	13878
ಸಾಮೂಹಿಕ ನೀರಾವರಿ ಕೊಳವೆ ಬಾವಿಗಳ ಸಂಖ್ಯೆ	161
ಒಟ್ಟು	14039

ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

2. ವಿದ್ಯುದ್ಧೀಕರಣಕ್ಕೆ ಫಲಾನುಭವಿಗಳು ಏನಾದರು ವಂತಿಗೆಯನ್ನು ತುಂಬುವ ವ್ಯವಸ್ಥೆ ಇದೆಯೇ

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಸಾಮೂಹಿಕ ನೀರಾವರಿ ಯೋಜನೆಯ ನಿಯಮಾನುಸಾರ ಈ ಯೋಜನೆಯಲ್ಲಿ ಪ್ರತಿ ಕೊಳವೆ ಬಾವಿಗೆ 25,000/–ರೂ. ಗಳಂತೆ ಭದ್ರತಾ ಠೇವಣಿ ಮೊತ್ತವನ್ನು ನಿಗಮದಿಂದಲೇ ಪಾವತಿಸಲಾಗುತ್ತಿದೆ. ವೈಯಕ್ತಿಕ ನೀರಾವರಿ ಯೋಜನೆಯ ನಿಯಮಾನುಸಾರ ಫಲಾನುಭವಿಗಳು ವಿದ್ಯುತ್ ಠೇವಣಿ ಪಾವತಿಸಿ ವಿದ್ಯುತ್ ಸಂಪರ್ಕ ಪಡೆಯಬೇಕಾಗಿರುತ್ತದೆ. ವೈಯಕ್ತಿಕ ಯೋಜನೆಯ ನಿಯಮಾನುಸಾರ ಪ್ರವರ್ಗ 1 ಹಾಗೂ 2ಎ ಗೆ ಸೇರಿದ ಫಲಾನುಭವಿಗಳಿಗೆ ಮಾತ್ರ ನೀರಾವರಿ ಸೌಲಭ್ಯವನ್ನು ಕೊಡಲಾಗುತ್ತಿದೆ. ಈ ವರ್ಗದ ಫಲಾನುಭವಿಗಳು ಸಣ್ಣ ಮತ್ತು ಅತಿಸಣ್ಣ ರೈತರಾಗಿದ್ದು, ಆರ್ಥಿಕವಾಗಿ ಸಬಲರಾಗಿಲ್ಲದ ಕಾರಣ, ಅವರುಗಳು ವಿದ್ಯುತ್ ಠೇವಣಿ (ವೈ.ಎಂ.ಡಿ. ಮತ್ತು ಎಂ.ಎಸ್.ಡಿ) ಯನ್ನು ಪಾವತಿಸದೇ ಇರುವುದರಿಂದ ಈ ಯೋಜನೆಯಲ್ಲಿ ಕೊರೆದ ಹೆಚ್ಚಿನ ಕೊಳವೆ ಬಾವಿಗಳು ವಿದ್ಯುತ್ ಸಂಪರ್ಕಕ್ಕೆ ಬಾಕಿ ಉಳಿದಿರುತ್ತವೆ. ಈ ಸಮಸ್ಯೆಯ ತೀವ್ರತೆಯನ್ನು ಮನಗಂಡು 2006–07ನೇ ಸಾಲಿನಿಂದ ವೈಯಕ್ತಿಕ ಯೋಜನೆ ಘಟಕವೆಚ್ಚವನ್ನು 75,000/– ರೂ.ಗಳಿಂದ 1.00 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿರುವುದರಿಂದ ಆ ವೆಚ್ಚದಲ್ಲಿ ವಿದ್ಯುತ್ ಠೇವಣಿ

ಮೊತ್ತವನ್ನು ಪಾವತಿಸಲಾಗುತ್ತದೆ. ಇದಲ್ಲದೆ, ಹಿಂದಿನ ಸಾಲುಗಳಲ್ಲಿ ವಿದ್ಯುದ್ಧೀಕರಣಕ್ಕೆ ಬಾಕಿ ಉಳಿದ ಎಲ್ಲಾ ಕೊಳವೆ ಬಾವಿಗಳಿಗೆ ಸರ್ಕಾರದಿಂದಲೇ ಫಲಾನುಭವಿಗಳ ಪರವಾಗಿ ವಿದ್ಯುತ್ ಠೇವಣಿ ಪಾವತಿಸಲು; ಈ ನಿಗಮಕ್ಕೆ 157.11 ಲಕ್ಷ ರೂ.ಗಳ ಮಂಜೂರಾತಿ ನೀಡಿರುತ್ತದೆ. ಈ ಮೊತ್ತದಿಂದ ವಿದ್ಯುತ್ ಠೇವಣಿ ಪಾವತಿಸಿ ವಿದ್ಯುದ್ಧೀಕರಣ ಮಾಡಿಸಲು ಕ್ರಮವಹಿಸಲಾಗಿರುತ್ತದೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ

2006-07ನೇ ಸಾಲಿನವರೆವಿಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವೈಯಕ್ತಿಕ ಕೊಳವೆ ಬಾವಿ ಯೋಜನೆಗೆ ಘಟಕ ವೆಚ್ಚ ರೂ.65,000ಗಳನ್ನು ನಿಗದಿಪಡಿಸಲಾಗಿರುತ್ತದೆ ಈ ಮೊತ್ತದಲ್ಲಿ ಕೊಳವೆಬಾವಿ ಕೊರೆಯುವಿಕೆ ಹಾಗೂ ಪಂಪ್‌ಸೆಟ್ ಅಳವಡಿಕೆ ಮಾಡಲಾಗುತ್ತಿದೆ. ವಿದ್ಯುದ್ಧೀಕರಣ ವೆಚ್ಚವನ್ನು ಫಲಾನುಭವಿಗಳೆ ಭರಿಸಬೇಕಾಗಿತ್ತು. ಕೆಲವೊಂದು ಫಲಾನುಭವಿಗಳು ಬಹಳ ಕಷ್ಟದಲ್ಲಿದ್ದು ಇವರುಗಳು ವಿದ್ಯುದ್ಧೀಕರಣ ವೆಚ್ಚವನ್ನು ಭರಿಸಲು ಸಾಧ್ಯವಿಲ್ಲವೆಂಬುದನ್ನು ಅರಿತು, ಫಲಾನುಭವಿಗಳು ಭರಿಸಬೇಕಾದ ಠೇವಣಿ ಮೊತ್ತವನ್ನು ಭರಿಸಲು ಈ ನಿಗಮಕ್ಕೆ ರೂ.62,86ಲಕ್ಷಗಳನ್ನು ಬಿಡುಗಡೆ ಮಾಡಿರುತ್ತಾರೆ. ಸದರಿ ಮೊತ್ತವನ್ನು ಕೆ.ಪಿ.ಟಿ.ಸಿ.ಎಲ್‌ಗೆ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. 2006-07ನೇ ಸಾಲಿಗೆ ವೈಯಕ್ತಿಕ ಕೊಳವೆಬಾವಿ ಯೋಜನೆಯಡಿಯಲ್ಲಿ ಘಟಕ ವೆಚ್ಚವನ್ನು ರೂ.1.00 ಲಕ್ಷಗಳವರೆವಿಗೆ ಹೆಚ್ಚಿಸಿದೆ.(ರೂ.86,000ಗಳ ಸಹಾಯಧನ ಮತ್ತು ರೂ.14,000ಗಳ ಸಾಲ) ಈ ಮೊತ್ತದಲ್ಲಿ ವಿದ್ಯುದ್ಧೀಕರಣ ಠೇವಣಿ ಹಣವನ್ನು ಸಹ ನಿಗಮದಿಂದಲೆ ಭರಿಸಲಾಗುತ್ತದೆ.

ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ

ಗಂಗಾ ಕಲ್ಯಾಣ ಯೋಜನೆಯಡಿ ನಿಗದಿಪಡಿಸಿದ ರೂ.65,000 ಸಹಾಯಧನ ಮತ್ತು ರೂ.15,000ಗಳ ಅವಧಿಸಾಲ, ಒಟ್ಟು ರೂ.75,000ಗಳ ಘಟಕ ವೆಚ್ಚದ ಮಿತಿಯೊಳಗೆ ಕೊಳವೆಬಾವಿ ಕೊರೆದು, ಪಂಪ್ ಅಳವಡಿಸಿ, ವಿದ್ಯುದ್ಧೀಕರಣಗೊಳಿಸಬೇಕಾಗಿದ್ದು, ನಿಗದಿಪಡಿಸಿದ ಘಟಕ ವೆಚ್ಚದ ಮಿತಿಗಿಂತ ಹೆಚ್ಚಾದ ಪ್ರಕರಣಗಳಿಗೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ವೈ.ಎಂ.ಡಿ:ಎಂ.ಎಸ್.ಡಿ ಮೊತ್ತವನ್ನು ಫಲಾನುಭವಿಗಳೇ ಭರಿಸಬೇಕಾದ ಪ್ರಮೇಯ ಇತ್ತು. ಆದರೆ ಸರ್ಕಾರ ದಿ:08.02.2007 ರಂದು ವೈ.ಎಂ.ಡಿ: ಎಂ.ಎಸ್.ಡಿ ಹಣವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಿ, ವಿದ್ಯುದ್ಧೀಕರಣಗೊಳಿಸಲು ಪರಿಶಿಷ್ಟ ಜಾತಿಯವರಿಗೆ ಸಂಬಂಧಿಸಿದಂತೆ ರೂ.506.84ಲಕ್ಷಗಳನ್ನು ಹಾಗೂ ಪರಿಶಿಷ್ಟ ವರ್ಗಕ್ಕೆ ಸಂಬಂಧಿಸಿದಂತೆ ರೂ.212.64ಲಕ್ಷಗಳನ್ನು ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಇನ್ನು ಮುಂದೆ

ಫಲಾನುಭವಿಗಳು ಯಾವುದೇ ವಂತಿಗೆಯನ್ನು ವಿದ್ಯುದೀಕರಣಕ್ಕಾಗಿ ತುಂಬುವ ಅವಶ್ಯಕತೆ ಇರುವುದಿಲ್ಲ.

3. ಹಾಗಿದ್ದಲ್ಲಿ, ಈ ಯೋಜನೆಗಳ ಕೊಳವೆ ಬಾವಿಗಳಿಗೆ ವಿದ್ಯುದೀಕರಣಗೊಳಿಸುವಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣವೇನು?

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

ನಿಗಮದಿಂದಲೇ ವಿದ್ಯುತ್ ಶೇವಣಿ ಪಾವತಿಸುತ್ತಿರುವುದರಿಂದ, ಸಾಮೂಹಿಕ ನೀರಾವರಿ ಯೋಜನೆಯಲ್ಲಿ ಕೊರೆದ ಕೊಳವೆ ಬಾವಿಗಳ ವಿದ್ಯುದೀಕರಣದಲ್ಲಿ ಸಮಸ್ಯೆ ಇರುವುದಿಲ್ಲ. ವೈಯಕ್ತಿಕ ಯೋಜನೆಯಲ್ಲಿ ಫಲಾನುಭವಿಗಳೇ ವಿದ್ಯುತ್ ಠೇವಣಿ ಪಾವತಿಸಬೇಕಾಗಿದ್ದ ಕಾರಣದಿಂದ ಹಾಗೂ ಫಲಾನುಭವಿಗಳು ವಿದ್ಯುತ್ ಠೇವಣಿ ಪಾವತಿಸದೇ ಇದ್ದ ಕಾರಣದಿಂದ ಈ ಯೋಜನೆಯಲ್ಲಿ ವಿದ್ಯುದೀಕರಣಕ್ಕೆ ಹೆಚ್ಚಿನ ಬಾಕಿ ಉಳಿದಿರುತ್ತದೆ. ಪ್ರಸ್ತುತ, ಸರ್ಕಾರದಿಂದ ಫಲಾನುಭವಿಗಳ ಪರವಾಗಿ ವಿದ್ಯುತ್ ಠೇವಣಿ ಪಾವತಿಸುತ್ತಿರುವುದರಿಂದ ಎಲ್ಲಾ ಕೊಳವೆ ಬಾವಿಗಳಿಗೆ ವಿದ್ಯುದೀಕರಣ ಮಾಡಿಸಿ ಪ್ರಗತಿ ಸಾಧಿಸಲಾಗುತ್ತಿದೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ನಿಯಮಿತ

ಫಲಾನುಭವಿಗಳು ಠೇವಣಿ ಮೊತ್ತವನ್ನು ಕಟ್ಟದೆ ಇರುವುದರಿಂದ ವಿದ್ಯುದೀಕರಣ ವಿಳಂಬವಾಗಿರುತ್ತದೆ. ಈಗ ಠೇವಣಿ ಮೊತ್ತವನ್ನು ಭರಿಸುತ್ತಿರುವುದರಿಂದ, ವಿದ್ಯುದೀಕರಣ ಕಾಮಗಾರಿಕೆ ತ್ವರಿತ ಗತಿಯಲ್ಲಿ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ

ಮೇಲಿನ ಆದೇಶದನ್ವಯ ದಿನಾಂಕ:16.03.2007ರಂದು ನಿಗಮಕ್ಕೆ ಹಣ ಬಿಡುಗಡೆ ಮಾಡಿದ್ದು ಸದರಿ ಮೊಬಲಗನ್ನು ಕೇಂದ್ರ ಕಛೇರಿಯಿಂದ ಎಲ್ಲಾ ಜಿಲ್ಲೆಗಳಿಗೆ ಅಂದೇ ಬಿಡುಗಡೆ ಮಾಡಿ ವಿದ್ಯುತ್ ಸರಬರಾಜ ಕಂಪೆನಿಗಳಿಗೆ ಪಾವತಿಸಿದ್ದು, ವಿದ್ಯುದ್ಧಿಕರಣಕ್ಕೆ ಬಾಕಿ ಇರುವ ಎಲ್ಲಾ ಕೊಳವೆ ಬಾವಿಗಳಿಗೆ ವಿದ್ಯುದ್ಧಿಕರಣಗೊಳಿಸಲು ಸೂಚನೆ ನೀಡಲಾಗಿದೆ. ಅದರಂತೆ ಇನ್ನೂ ಮುಂದೆ ವಿದ್ಯುದ್ಧಿಕರಣದ ವಿಳಂಬಕ್ಕೆ ಆಸ್ಪದ ಇರುವುದಿಲ್ಲ.

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ,
ಬೆಂಗಳೂರು-20

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬಿ. ಶಿವರಾಮು (ಗಂಡಸಿ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ–1616ರ (ಅ) ಪ್ರಶ್ನೆಗೆ ಅನುಬಂಧ–1

ಗಂಗಾ ಕಲ್ಯಾಣ ಸಾಮೂಹಿಕ ಯೋಜನೆಯ ಕೊಳವೆ ಬಾವಿಗಳ ವರ್ಷಾವಾರು ಮತ್ತು ಜಿಲ್ಲಾವಾರು ವಿವರಗಳು

ಎಸ್ಕಾಂಹೆಸರು	ಕ್ರ.ಸಂ	ಜಿಲ್ಲೆಯ ಹೆಸರು	1996-97			1998-99			1999-2000		
			ಕೊರೆದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕವಾದ ಕೊ.ಬಾ.ಸಂ	ಬಾಕಿ ಉಳಿದಿರುವ ಕೊ.ಬಾ.ಸಂ	ಕೊರೆದ ಕೊ.ಬಾ.ಸಂ	ವಿದ್ಯುತ್ ಸಂಪರ್ಕವಾದ ಕೊ.ಬಾ.ಸಂ	ಬಾಕಿ ಉಳಿದಿರುವ ಕೊ.ಬಾ.ಸಂ	ಕೊರೆದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕವಾದ ಕೊ.ಬಾ.ಸಂ	ಬಾಕಿ ಉಳಿದಿರುವ ಕೊ.ಬಾ.ಸಂ
	1	2	3	4	5	6	7	8	9	10	11
BESCOM	1	ಬೆಂ.(ನಗರ)	8	8	0	11	11	0	7	7	0
	2	ಬೆಂ.(ಗ್ರಾ)	32	32	0	19	19	0	0	0	0
	3	ತುಮಕೂರು	4	4	0	17	17	0	3	3	0
	4	ಚಿತ್ರದುರ್ಗ	0	0	0	16	16	0	23	23	0
	5	ಕೋಲಾರ	9	9	0	10	10	0	6	6	0
	6	ದಾವಣಗೆರೆ	18	18	0	18	18	0	17	17	0
		ಒಟ್ಟು	**71**	**71**	**0**	**91**	**91**	**0**	**56**	**56**	**0**

CESCOM	7	ಮೈಸೂರು	7	7	0	26	26	0	7	7	0
	8	ಮಂಡ್ಯ	2	2	0	13	13	0	22	22	0
	9	ಚಾ.ರಾ.ನಗರ	0	0	0	5	5	0	18	18	0
	10	ಹಾಸನ	0	0	0	12	12	0	12	12	0
		ಒಟ್ಟು	**9**	**9**	**0**	**56**	**56**	**0**	**59**	**59**	**0**
GESCOM	11	ಗುಲ್ಬರ್ಗಾ	0	0	0	40	40	0	30	30	0
	12	ಬೀದರ್	1	1	0	20	20	0	0	0	0
	13	ರಾಯಚೂರು	0	0	0	0	0	0	30	30	0
	14	ಕೊಪ್ಪಳ	0	0	0	0	0	0	11	11	0
	15	ಬಳ್ಳಾರಿ	0	0	0	0	0	0	9	9	0
		ಒಟ್ಟು	**1**	**1**	**0**	**60**	**60**	**0**	**80**	**80**	**0**
HESCOM	16	ಬೆಳಗಾವಿ	0	0	0	0	0	0	22	22	0
	17	ಹಾವೇರಿ	2	2	0	39	39	0	0	0	0
	18	ಗದಗ	0	0	0	0	0	0	20	20	0
	19	ಬಿಜಾಪುರ	78	78	0	31	31	0	0	0	0
	20	ಬಾಗಲಕೋಟೆ	7	7	0	0	0	0	17	17	0
	21	ಧಾರವಾಡ	0	0	0	0	0	0	20	20	0
	22	ಉತ್ತರ ಕನ್ನಡ	0	0	0	0	0	0	15	15	0

		ಒಟ್ಟು	**87**	**87**	**0**	**70**	**70**	**0**	**94**	**94**	**0**
MESCOM	23	ದಕ್ಷಿಣ ಕನ್ನಡ	0	0	0	0	0	0	0	0	0
	24	ಶಿವಮೊಗ್ಗ	4	4	0	18	18	0	0	0	0
	25	ಕೊಡಗು	0	0	0	6	6	0	0	0	0
	26	ಉಡುಪಿ	0	0	0	0	0	0	0	0	0
	27	ಚಿಕ್ಕಮಗಳೂರು	20	20	0	20	20	0	20	20	0
		ಒಟ್ಟು	**24**	**24**	**0**	**44**	**44**	**0**	**20**	**20**	**0**
	ಎಲ್ಲಾ ಒಟ್ಟು		**192**	**192**	**0**	**321**	**321**	**0**	**309**	**309**	**0**

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು–20										
ಗಂಗಾ ಕಲ್ಯಾಣ ಸಾಮೂಹಿಕ ಯೋಜನೆಯ ಕೊಳವೆ ಬಾವಿಗಳ ವರ್ಷಾವಾರು ಮತ್ತು ಜಿಲ್ಲಾವಾರು ವಿವರಗಳು										
ಎಸ್ಕಾ ಹೆಸರು	ಕ್ರ.ಸಂ	ಜಿಲ್ಲೆಯ ಹೆಸರು	2000-2001			2001-2002			2002-2003	
			ಕೊರೆದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕವಾದ ಕೊ.ಬಾ.ಸಂ	ಬಾಕಿ ಉಳಿದಿರುವ ಕೊ.ಬಾ.ಸಂ	ಕೊರೆದ ಕೊ.ಬಾ.ಸಂ	ವಿದ್ಯುತ್ ಸಂಪರ್ಕವಾದ ಕೊ.ಬಾ.ಸಂ	ಬಾಕಿ ಉಳಿದಿರುವ ಕೊ.ಬಾ.ಸಂ	ಕೊರೆದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕವಾದ ಕೊ.ಬಾ.ಸಂ	ಬಾಕಿ ಉಳಿದಿರುವ ಕೊ.ಬಾ.ಸಂ
	1	2	3	4	5	6	7	8	9	10	11
BESCOM	1	ಬೆಂ.(ನಗರ)	4	4	0	1	1	0	0	0	0
	2	ಬೆಂ.(ಗ್ರಾ)	15	15	0	8	8	0	4	4	0
	3	ತುಮಕೂರು	7	7	0	13	13	0	5	5	0
	4	ಚಿತ್ರದುರ್ಗ	26	26	0	1	1	0	0	0	0
	5	ಕೋಲಾರ	14	14	0	2	2	0	3	3	0
	6	ದಾವಣಗೆರೆ	16	16	0	2	2	0	2	2	0
		ಒಟ್ಟು	**82**	**82**	**0**	**27**	**27**	**0**	**14**	**14**	**0**
CESCOM	7	ಮೈಸೂರು	22	22	0	9	9	0	2	2	0

	8	ಮಂಡ್ಯ	28	28	0	9	9	0	6	6	0
	9	ಚಾ.ರಾ.ನಗರ	16	16	0	6	6	0	2	2	0
	10	ಹಾಸನ	41	41	0	11	11	0	4	4	0
		ಒಟ್ಟು	**107**	**107**	**0**	**35**	**35**	**0**	**14**	**14**	**0**
GESCOM	11	ಗುಲ್ಬರ್ಗಾ	27	27	0	8	8	0	2	2	0
	12	ಬೀದರ್	8	8	0	14	14	0	2	2	0
	13	ರಾಯಚೂರು	17	17	0	6	6	0	2	2	0
	14	ಕೊಪ್ಪಳ	15	15	0	9	9	0	7	7	0
	15	ಬಳ್ಳಾರಿ	0	0	0	0	0	0	0	0	0
		ಒಟ್ಟು	**67**	**67**	**0**	**37**	**37**	**0**	**13**	**13**	**0**
HESCOM	16	ಬೆಳಗಾವಿ	8	8	0	4	4	0	0	0	0
	17	ಹಾವೇರಿ	9	9	0	8	8	0	0	0	0
	18	ಗದಗ	10	10	0	2	2	0	2	2	0
	19	ಬಿಜಾಪುರ	0	0	0	3	3	0	6	6	0
	20	ಬಾಗಲಕೋಟೆ	26	26	0	8	8	0	0	0	0
	21	ಧಾರವಾಡ	9	9	0	8	8	0	5	5	0
	22	ಉತ್ತರ ಕನ್ನಡ	0	0	0	0	0	0	0	0	0
		ಒಟ್ಟು	**62**	**62**	**0**	**33**	**33**	**0**	**13**	**13**	**0**

MESCOM	23	ದಕ್ಷಿಣ ಕನ್ನಡ	0	0	0	2	2	0	0	0	0
	24	ಶಿವಮೊಗ್ಗ	12	12	0	8	8	0	2	2	0
	25	ಕೊಡಗು	6	6	0	6	6	0	0	0	0
	26	ಉಡುಪಿ	0	0	0	0	0	0	0	0	0
	27	ಚಿಕ್ಕಮಗಳೂರು	4	4	0	4	4	0	2	2	0
		ಒಟ್ಟು	**22**	**22**	**0**	**20**	**20**	**0**	**4**	**4**	**0**
	ಎಲ್ಲಾ ಒಟ್ಟು		**340**	**340**	**0**	**152**	**152**	**0**	**58**	**58**	**0**

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು–20

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬಿ. ಶಿವರಾಮು (ಗಂಡಸಿ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ–1616ರ (ಅ) ಪ್ರಶ್ನೆಗೆ.

ಅನುಬಂಧ–1

ಗಂಗಾ ಕಲ್ಯಾಣ ವೈಯಕ್ತಿಕ ಯೋಜನೆಯ ಕೊಳವೆ ಬಾವಿಗಳ ವರ್ಷಾವಾರು ಮತ್ತು ಜಿಲ್ಲಾವಾರು ವಿವರಗಳು

ಎಸ್ಕಾ ಹೆಸರು	ಕ್ರ ಸಂ	ಜಿಲ್ಲೆಯ ಹೆಸರು	2000-2001			2001-2002			2002-2003		
			ಕೊರೆದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕಿತವಾದ ಕೊ.ಬಾ.ಸಂ	ಬಾಕಿ ಉಳಿದಿರುವ ಕೊ.ಬಾ.ಸಂ	ಕೊರೆದ ಕೊ.ಬಾ.ಸಂ	ವಿದ್ಯುತ್ ಸಂಪರ್ಕಿತವಾದ ಕೊ.ಬಾ.ಸಂ	ಬಾಕಿ ಉಳಿದಿರುವ ಕೊ.ಬಾ.ಸಂ	ಕೊರೆದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕಿತವಾದ ಕೊ.ಬಾ.ಸಂ	ಬಾಕಿ ಉಳಿದಿರುವ ಕೊ.ಬಾ.ಸಂ
	1	2	3	4	5	6	7	8	9	10	11
BESCOM	1	ಬೆಂ.(ನಗರ)	0	0	0	16	16	0	7	7	0
	2	ಬೆಂ.(ಗ್ರಾ)	0	0	0	19	8	11	17	3	14
	3	ತುಮಕೂರು	0	0	0	19	11	8	26	18	8
	4	ಚಿತ್ರದುರ್ಗ	26	12	14	25	0	25	16	3	12
	5	ಕೋಲಾರ	15	15	0	16	13	3	15	6	9
	6	ದಾವಣಗೆರೆ	15	14	1	19	3	16	13	5	8

		ಒಟ್ಟು	**56**	**41**	**15**	**114**	**51**	**63**	**94**	**42**	**52**
CESCOM	7	ಮೈಸೂರು	1	1	0	36	36	0	14	13	1
	8	ಮಂಡ್ಯ	6	6	0	16	12	4	12	8	4
	9	ಚಾ.ರಾ.ನಗರ	2	2	0	10	6	4	10	4	6
	10	ಹಾಸನ	0	0	0	15	3	12	15	4	11
		ಒಟ್ಟು	**9**	**9**	**0**	**77**	**57**	**20**	**51**	**29**	**22**
GESCOM	11	ಗುಲ್ಬರ್ಗಾ	4	4	0	36	22	14	21	11	10
	12	ಬೀದರ್	0	0	0	14	1	13	12	1	11
	13	ರಾಯಚೂರು	18	5	13	13	1	12	6	2	4
	14	ಕೊಪ್ಪಳ	10	4	6	11	11	0	10	10	0
	15	ಬಳ್ಳಾರಿ	14	13	1	33	14	19	13	6	7
		ಒಟ್ಟು	**46**	**26**	**20**	**107**	**49**	**58**	**62**	**30**	**32**
HESCOM	16	ಬೆಳಗಾವಿ	0	0	0	27	6	21	20	3	17
	17	ಹಾವೇರಿ	0	0	0	13	5	8	11	8	3
	18	ಗದಗ	9	9	0	15	4	11	11	6	5
	19	ಬಿಜಾಪುರ	7	5	2	22	2	20	13	10	3
	20	ಬಾಗಲಕೋಟೆ	1	0	1	26	14	12	10	6	4
	21	ಧಾರವಾಡ	1	1	0	21	11	10	14	9	5

	22	ಉತ್ತರ ಕನ್ನಡ	19	16	3	13	5	8	14	1	13
		ಒಟ್ಟು	**37**	**31**	**6**	**137**	**47**	**90**	**93**	**43**	**50**
MESCOM	23	ದಕ್ಷಿಣ ಕನ್ನಡ	4	4	0	14	9	5	10	8	2
	24	ಶಿವಮೊಗ್ಗ	6	6	0	18	11	7	10	4	6
	25	ಕೊಡಗು	5	5	0	14	13	1	5	1	4
	26	ಉಡುಪಿ	0	0	0	0	0	0	5	5	0
	27	ಚಿಕ್ಕಮಗಳೂರು	5	5	0	12	7	5	12	8	4
		ಒಟ್ಟು	**20**	**20**	**0**	**58**	**40**	**18**	**42**	**26**	**16**
	ಎಲ್ಲಾ ಒಟ್ಟು		**168**	**127**	**41**	**493**	**244**	**249**	**342**	**170**	**172**

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು-20											
ಗಂಗಾ ಕಲ್ಯಾಣ ಸಾಮೂಹಿಕ ಯೋಜನೆಯ ಕೊಳವೆ ಬಾವಿಗಳ ವರ್ಷಾವಾರು ಮತ್ತು ಜಿಲ್ಲಾವಾರು ವಿವರಗಳು											
ಎಸ್ಕಾಂಹೆಸರು	ಕ್ರ ಸಂ	ಜಿಲ್ಲೆಯ ಹೆಸರು	2003-2004			2004-2005			2005-2006		
			ಕೊರೆದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕ ಹೊಂದಿದ ಕೊಳವೆ ಬಾವಿಗಳ ಸಂಖ್ಯೆ	ಬಾಕಿ ಉಳಿದಿರುವ ಕೊಳವೆ ಬಾವಿಗಳ ಸಂಖ್ಯೆ	ಕೊರೆದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕ ಹೊಂದಿದ ಕೊಳವೆ ಬಾವಿಗಳ ಸಂಖ್ಯೆ	ಬಾಕಿ ಉಳಿದಿರುವ ಕೊಳವೆ ಬಾವಿಗಳ ಸಂಖ್ಯೆ	ಕೊರೆದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕಹೊಂದಿದ ಕೊಳವೆ ಬಾವಿಗಳ ಸಂಖ್ಯೆ	ಬಾಕಿ ಉಳಿದಿರುವ ಕೊಳವೆ ಬಾವಿಗಳ ಸಂಖ್ಯೆ
	1	2	3	4	5	6	7	8	9	10	11
BESCOM	1	ಬೆಂ.(ನಗರ)	17	3	14	17	3	14	14	0	14
	2	ಬೆಂ.(ಗ್ರಾ)	19	4	15	38	5	33	44	0	44
	3	ತುಮಕೂರು	23	3	20	59	13	46	67	2	65
	4	ಚಿತ್ರದುರ್ಗ	11	3	8	35	2	33	38	0	38
	5	ಕೋಲಾರ	15	6	9	43	33	10	44	0	44
	6	ದಾವಣಗೆರೆ	13	4	9	25	7	18	28	0	28
		ಒಟ್ಟು	**98**	**23**	**75**	**217**	**63**	**154**	**235**	**2**	**233**
CESCOM	7	ಮೈಸೂರು	14	10	4	49	43	6	30	3	27

	8	ಮಂಡ್ಯ	16	6	10	44	35	9	58	0	58
	9	ಚಾ.ರಾ.ನಗರ	6	4	2	25	10	15	23	1	22
	10	ಹಾಸನ	16	1	15	37	1	36	43	0	43
		ಒಟ್ಟು	**52**	**21**	**31**	**155**	**89**	**66**	**154**	**4**	**150**
GESCOM	11	ಗುಲ್ಬರ್ಗಾ	19	9	10	79	0	79	53	0	53
	12	ಬೀದರ್	12	0	12	28	0	28	33	0	33
	13	ರಾಯಚೂರು	6	0	6	17	2	15	32	1	31
	14	ಕೊಪ್ಪಳ	11	10	1	17	15	2	23	0	23
	15	ಬಳ್ಳಾರಿ	14	5	9	33	10	23	32	2	30
		ಒಟ್ಟು	**62**	**24**	**38**	**174**	**27**	**147**	**173**	**3**	**170**
HESCOM	16	ಬೆಳಗಾವಿ	16	4	12	57	3	54	56	1	55
	17	ಹಾವೇರಿ	11	5	6	26	11	15	30	0	30
	18	ಗದಗ	10	5	5	23	0	23	21	1	20
	19	ಬಿಜಾಪುರ	15	6	9	33	3	30	34	1	33
	20	ಬಾಗಲಕೋಟೆ	13	10	3	29	13	16	33	3	30
	21	ಧಾರವಾಡ	13	5	8	24	8	16	24	1	23
	22	ಉತ್ತರ ಕನ್ನಡ	9	3	6	18	2	16	14	1	13
		ಒಟ್ಟು	**87**	**38**	**49**	**210**	**40**	**170**	**212**	**8**	**204**

MESCOM	23	ದಕ್ಷಿಣ ಕನ್ನಡ	8	7	1	27	19	8	19	0	19
	24	ಶಿವಮೊಗ್ಗ	10	4	6	32	15	17	39	5	34
	25	ಕೊಡಗು	1	1	0	11	2	9	5	0	5
	26	ಉಡುಪಿ	4	4	0	7	6	1	4	4	0
	27	ಚಿಕ್ಕಮಗಳೂರು	12	5	7	18	8	8	24	0	24
		ಒಟ್ಟು	**35**	**21**	**14**	**93**	**50**	**43**	**91**	**9**	**82**
	ಎಲ್ಲಾ ಒಟ್ಟು		**334**	**127**	**207**	**849**	**269**	**580**	**865**	**26**	**839**

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು–20												
ಗಂಗಾ ಕಲ್ಯಾಣ ಸಾಮೂಹಿಕ ಯೋಜನೆಯ ಕೊಳವೆ ಬಾವಿಗಳ ವರ್ಷಾವಾರು ಮತ್ತು ಜಿಲ್ಲಾವಾರು ವಿವರಗಳು												
ಎಸ್ಕಾಂಹೆಸರು	ಕ್ರ ಸಂ	ಜಿಲ್ಲೆಯ ಹೆಸರು	2003-2004			2004-2005			2005-2006			
			ಕೊರೆದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕ ನೀಡಿದ ಕೊ.ಬಾ.ಸಂ	ಬಾಕಿ ಉಳಿದಿರುವ ಕೊ.ಬಾ.ಸಂ	ಕೊರೆದ ಕೊ.ಬಾ.ಸಂ	ವಿದ್ಯುತ್ ಸಂಪರ್ಕನೀಡಿದ ಹೊಂದಿದ ಕೊ.ಬಾ.ಸಂ	ಬಾಕಿ ಉಳಿದಿರುವ ಕೊ.ಬಾ.ಸಂ	ಕೊರೆದ ಕೊ.ಬಾ.ಸಂ	ವಿದ್ಯುತ್ ಸಂಪರ್ಕನೀಡಿದ ಕೊ.ಬಾ.ಸಂ	ಬಾಕಿ ಉಳಿದಿರುವ ಕೊ.ಬಾ.ಸಂ	
	1	2	3	4	5	6	7	8	9	10	11	
BESCOM	1	ಬೆಂ.(ನಗರ)	8	2	6	7	6	1	0	0	0	
	2	ಬೆಂ.(ಗ್ರಾ)	8	3	5	16	5	11	16	0	16	
	3	ತುಮಕೂರು	8	2	6	12	4	8	10	0	10	
	4	ಚಿತ್ರದುರ್ಗ	8	4	4	18	6	12	18	0	18	
	5	ಕೋಲಾರ	6	5	1	22	11	11	0	0	0	
	6	ದಾವಣಗೆರೆ	2	0	2	12	4	8	12	0	12	

		ಒಟ್ಟು	**40**	**16**	**24**	**87**	**36**	**51**	**56**	**6**	**56**
CESCOM	7	ಮೈಸೂರು	4	4	0	8	8	0	8	0	8
	8	ಮಂಡ್ಯ	6	6	0	13	13	0	26	0	26
	9	ಚಾ.ರಾ.ನಗರ	1	4	0	8	2	6	2	0	2
	10	ಹಾಸನ	2	0	2	12	2	10	18	0	18
		ಒಟ್ಟು	**16**	**14**	**2**	**41**	**25**	**16**	**54**	**0**	**54**
GESCOM	11	ಗುಲ್ಬರ್ಗಾ	6	0	6	14	2	12	0	0	0
	12	ಬೀದರ್	6	0	6	8	2	6	14	0	14
	13	ರಾಯಚೂರು	6	4	2	6	6	0	6	0	6
	14	ಕೊಪ್ಪಳ	2	2	0	15	0	15	8	0	8
	15	ಬಳ್ಳಾರಿ	2	2	0	8	8	0	10	0	10
		ಒಟ್ಟು	**22**	**8**	**14**	**51**	**18**	**33**	**38**	**0**	**38**
HESCOM	16	ಬೆಳಗಾವಿ	5	3	2	5	2	3	13	0	13
	17	ಹಾವೇರಿ	2	0	2	10	2	8	10	0	10
	18	ಗದಗ	6	0	6	6	0	6	0	0	0
	19	ಬಿಜಾಪುರ	8	2	6	12	2	10	12	0	12
	20	ಬಾಗಲಕೋಟೆ	10	10	0	16	6	10	11	0	11
	21	ಧಾರವಾಡ	7	5	2	15	9	6	17	0	17

	22	ಉತ್ತರ ಕನ್ನಡ	0	0	0	12	0	12	0	0	0
		ಒಟ್ಟು	**38**	**20**	**18**	**76**	**21**	**55**	**63**	**0**	**63**
MESCOM	23	ದಕ್ಷಿಣ ಕನ್ನಡ	4	4	0	10	10	0	6	0	6
	24	ಶಿವಮೊಗ್ಗ	0	0	0	12	2	10	12	2	10
	25	ಕೊಡಗು	2	2	0	11	3	8	2	0	2
	26	ಉಡುಪಿ	0	0	0	0	0	0	0	0	0
	27	ಚಿಕ್ಕಮಗಳೂರು	8	2	6	6	1	5	8	0	8
		ಒಟ್ಟು	**14**	**8**	**6**	**39**	**16**	**23**	**28**	**2**	**26**
		ಎಲ್ಲಾ ಒಟ್ಟು	**130**	**66**	**64**	**294**	**116**	**178**	**239**	**2**	**237**

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು–20

ಗಂಗಾ ಕಲ್ಯಾಣ ಸಾಮೂಹಿಕ ಮತ್ತು ವೈಯುಕ್ತಿಕ ಯೋಜನೆಯ ಕೊಳವೆ ಬಾವಿಗಳ 2006–07ನೇ ಸಾಲಿನ ಜಿಲ್ಲಾವಾರು

ಎಸ್ಕಾಂ ಹೆಸರು	ಕ್ರಸಂ	ಜಿಲ್ಲೆಯ ಹೆಸರು	2006–07ನೇ ಸಾಲಿನಲ್ಲಿ ಕೊರೆದ ಕೊಳವೆ ಬಾವಿಗಳ ಸಂಖ್ಯೆ			ವಿದ್ಯುತ್ ಸಂಪರ್ಕ ವಾದ ಕೊ.ಬಾ.ಸಂ	ಬಾಕಿ ಉಳಿದಿರುವ ಕೊ.ಬಾ.ಸಂ
			ಸಾಮೂಹಿಕ	ವೈಯಕ್ತಿಕ	ಒಟ್ಟು		
	1	2	3	4	5	6	7
BESCOM	1	ಬೆಂ.(ನಗರ)	0	0	0	0	0
	2	ಬೆಂ.(ಗ್ರಾ)	0	6	6	0	6
	3	ತುಮಕೂರು	4	20	24	0	24
	4	ಚಿತ್ರದುರ್ಗ	14	54	68	0	68
	5	ಕೋಲಾರ	0	0	0	0	0
	6	ದಾವಣಗೆರೆ	12	39	51	0	51
		ಒಟ್ಟು	30	119	149	0	149
CESCOM	7	ಮೈಸೂರು	0	0	0	0	0
	8	ಮಂಡ್ಯ	8	27	35	0	35
	9	ಚಾ.ರಾ.ನಗರ	8	31	39	0	39
	10	ಹಾಸನ	10	41	51	0	51
		ಒಟ್ಟು	26	99	125	0	125

GESCOM	11	ಗುಲ್ಬರ್ಗಾ	14	56	70	0	70
	12	ಬೀದರ್	14	40	54	0	54
	13	ರಾಯಚೂರು	6	20	26	0	26
	14	ಕೊಪ್ಪಳ	6	25	31	0	31
	15	ಬಳ್ಳಾರಿ	10	33	43	0	43
		ಒಟ್ಟು	50	174	224	0	224
HESCOM	16	ಬೆಳಗಾವಿ	12	64	76	0	76
	17	ಹಾವೇರಿ	8	31	39	0	39
	18	ಗದಗ	8	15	23	0	23
	19	ಬಿಜಾಪುರ	21	48	69	0	69
	20	ಬಾಗಲಕೋಟೆ	8	30	38	0	38
	21	ಧಾರವಾಡ	14	27	41	0	41
	22	ಉತ್ತರ ಕನ್ನಡ	2	12	14	0	14
		ಒಟ್ಟು	73	227	300	0	300
MESCOM	23	ದಕ್ಷಿಣ ಕನ್ನಡ	0	0	0	0	0
	24	ಶಿವಮೊಗ್ಗ	4	33	37	0	37
	25	ಕೊಡಗು	0	0	0	0	0
	26	ಉಡುಪಿ	0	0	0	0	0

	27	ಚಿಕ್ಕಮಗಳೂರು	2	24	26	0	26
		ಒಟ್ಟು	6	57	63	0	63
	ಎಲ್ಲಾ ಒಟ್ಟು		185	676	861	0	861

ಅನುಬಂಧ – ಅ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು																					
ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವರಾಮು.ಬಿ (ಗಂಡಸಿ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1616ಕ್ಕೆ ಜಿಲ್ಲಾವಾರು ಹಾಗೂ ವರ್ಷಾವಾರು ಮಾಹಿತಿ																					
2005–06ನೇ ಸಾಲಿನ ವರೆವಿಗೆ ಕೊರೆದಿರುವ ಕೊಳವೆ ಬಾವಿಗಳ ವಿದ್ಯುದ್ದೀಕರಣ ಗೊಳಿಸಲು ಬಾಕಿ ಉಳಿದಿರುವ ಕೊಳವೆಬಾವಿಗಳ ಸಂಖ್ಯೆ, ಜಿಲ್ಲಾವಾರು ವರ್ಷವಾರು ಮಾಹಿತಿ																					
		1997–98		1998–99		1999–200		2000–01		2001–02		2002–03		2003–04		2004–05		2005–06		ಒಟ್ಟು	
ಕ್ರ.ಸಂ.	ಜಿಲ್ಲೆಯ ಹೆಸರು	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ.	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ	ವಿ. ಗೊಳಿಸ ಬೇಕಾಗಿದೆ
		ಸಾ	ವೈ	ಸಾ	ವೈ	ಸಾ	ವೈ	ಸಾ	ವೈ	ಸಾ	ವೈ	ಸಾ	ವೈ	ಸಾ	ವೈ	ಸಾ	ವೈ	ಸಾ	ವೈ	ಸಾ	ವೈ
ಅ	ಬೆಂಗಳೂರು ವಿಭಾಗ																				
1	ಬೆಂಗಳೂರು ನಗರ										15		9					0	7	0	31
2	ಬೆಂಗಳೂರು (ಗ್ರಾ)										21		11					0	28	0	60
3	ಕೋಲಾರ										8	4	16					2	28	6	52
4	ಚಿತ್ರದುರ್ಗ							3		1	22		13					2	32	6	67
5	ತುಮಕೂರು							2	9		5	2	10					6	42	10	66

6	ಶಿವಮೊಗ್ಗ							4	9		11	2	15					0	33	6	68
7	ದಾವಣಗೆರೆ					2					5	2	8					0	25	4	38
ಆ	ಗುಲ್ಬರ್ಗಾ ವಿಭಾಗ																				
1	ರಾಯಚೂರು	0	0			0	0	0	0	0	0	4	4	0	21	4	17	2	19	10	61
2	ಕೊಪ್ಪಳ								8	2		5	10					0	47	7	65
3	ಬಳ್ಳಾರಿ												14					10	20	10	34
4	ಬೀದರ್	0	0	0					10		23	14	19					6	45	20	97
5	ಗುಲ್ಬರ್ಗಾ	0	0	0	0	0	0			0	0	0	8	0	8	0	12	14	34	14	62
ಇ	ಮೈಸೂರು ವಿಭಾಗ																				
1	ಚಿಕ್ಕಮಗಳೂರ ು							2	5	2	8	4	10					2	13	10	36
2	ಹಾಸನ					0	0	0	0		0	2	0	2	0	4	10	18	17	26	27
3	ಕೊಡಗು																	0	4	0	4
4	ಮೈಸೂರು								2	3	4	2	7					0	23	5	36
5	ಮಂಡ್ಯ							2	3	2	3							4	26	8	32
6	ದಕ್ಷಿಣ ಕನ್ನಡ								14		20							6	11	6	45

7	ಚಾಮರಾಜನಗರ							4	15	5	2		15					0	21	9	53
8	ಉಡುಪಿ																	0	2	0	2
ಈ	**ಬೆಳಗಾಂ ವಿಭಾಗ**																				
1	ಬೆಳಗಾಂ							6	11	2	10							0	20	8	41
2	ಬಿಜಾಪುರ	0	0	0	0	0	0	7	0	13	12	16	12					17	27	53	51
3	ಧಾರವಾಡ								11		22		23					0	35	0	91
4	ಉತ್ತರ ಕನ್ನಡ							4	20		9							2	36	6	65
5	ಹಾವೇರಿ							0	0		6		5	0	9	2	9	0	23	2	52
6	ಗದಗ್							2	1	2	1	0	0	2	6	2	13	2	21	10	42
7	ಬಾಗಲಕೋಟೆ											6	13					6	16	12	29
	ಒಟ್ಟು	**0**	**0**	**0**	**0**	**2**	**0**	**36**	**118**	**32**	**207**	**63**	**222**	**4**	**44**	**1 2**	**61**	**99**	**655**	**248**	**1307**

ವಿ. ಗೊಳಿಸಬೇಕಾಗಿದೆ:– ವಿದ್ಯುದ್ಧಿಕರಣಗೊಳಿಸಬೇಕಾಗಿದೆ.

ಸರ್ಕಾರದ ಅಧೀನ ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಇಲಾಖೆ

ಅನುಬಂಧ 1

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಶಿವರಾಮು.ಬಿ (ಗಂಡಸಿ) ಇವರ
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1616 ಕ್ಕೆ ಉತ್ತರ
ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕೇಂದ್ರ ಕಛೇರಿ, ಬೆಂಗಳೂರು
ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುದ್ಧೀಕರಣಕ್ಕೆ ಬಾಕಿ ಇರುವ ವೈಯಕ್ತಿಕ ಮತ್ತು
ಸಾಮಾಜಿಕ ಕೊಳವೆಬಾವಿಗಳ ವಿವರ
(ವರ್ಷಾವಾರು ಮತ್ತು ಜಿಲ್ಲಾವಾರು)

ಕ್ರಸಂ	ಜಿಲ್ಲೆಗಳು	2001-02	2002-03	2003-04	2004-05	2005-06	2006-07	ಒಟ್ಟು
	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ							
1	ಕೊಪ್ಪಳ			9	10	243	383	645
2	ರಾಯಚೂರು			33	108	390	419	950
3	ಬಳ್ಳಾರಿ			5	35	217	103	360
4	ಬೀದರ್			10	50	295	202	557
5	ಗುಲ್ಬರ್ಗಾ		10	152	156	413	650	1381
	ಒಟ್ಟು		10	209	359	1558	1757	3893
	ಮೈಸೂರು ವಿದ್ಯುತ್ ಸರಬರಾಜು ಕಂಪನಿ							
1	ಮೈಸೂರು		5	5	18	92	318	438
2	ಮಂಡ್ಯ		14	45	111	275	212	657
3	ಹಾಸನ	1	8	3	99	244	168	523
4	ಚಾಮರಾಜನಗರ				7	74	135	216
	ಒಟ್ಟು	1	27	53	235	685	833	1834
	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ							
1	ಬಾಗಲಕೋಟೆ				23	157	101	281
2	ಬೆಳಗಾಂ			8	40	244	318	610
3	ಬಿಜಾಪುರ		5	25	185	331	191	737
4	ಧಾರವಾಡ				9	25	55	89
5	ಗದಗ್		9	31	85	159	114	398
6	ಹಾವೇರಿ	4	18	48	183	224	94	571
7	ಉತ್ತರ ಕನ್ನಡ					185	15	200
	ಒಟ್ಟು	4	32	104	462	924	888	2886
	ಬೆಂಗಳೂರು ವಿದ್ಯುತ್							

	ಸರಬರಾಜು ಕಂಪನಿ							
1	ಬೆಂಗಳೂರು ಗ್ರಾ		2	8	102	110	187	409
2	ಬೆಂಗಳೂರು ನಗರ		2	5	12	5	5	29
3	ದಾವಣಗೆರೆ	2	4	64	118	387	509	1084
4	ಕೋಲಾರ	4	6	32	101	584	501	1228
5	ಚಿತ್ರದುರ್ಗ				1	486	255	742
6	ತುಮಕೂರು	2	3	5	22	300	591	923
	ಒಟ್ಟು	8	17	114	356	1872	2048	4415
	ಮಂಗಳೂರು ವಿದ್ಯುತ್ ಸರಬರಾಜು							
1	ಚಿಕ್ಕಮಗಳೂರು			2	6	160	115	283
2	ದಕ್ಷಿಣ ಕನ್ನಡ					0	0	0
3	ಕೊಡಗು					56	5	61
4	ಉಡುಪಿ					23	0	23
5	ಶಿವಮೊಗ್ಗ		2	18	42	351	231	644
	ಒಟ್ಟು	0	2	20	48	590	351	1011
	GRAND TOTAL	**13**	**88**	**500**	**1460**	**5629**	**5877**	**14039**

ಶ್ರೀ ಬಿ.ಶಿವರಾಮು:- ಮಾನ್ಯ ಅಧ್ಯಕ್ಷರೆ, ಅವರು ಒದಗಿಸಿರುವ ಉತ್ತರ ಬಹಳ ಸುಧೀರ್ಘವಾಗಿದೆ. 2001-02 ರಿಂದ 2005-06ರವರೆಗೆ ನಿಮ್ಮ ಎಲ್ಲಾ ನಿಗಮಗಳಿಂದ ಅಂದರೆ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಹಾಗೂ ಪರಿಶಿಷ್ಟ ಜನಾಂಗದ ನಿಗಮದಿಂದ 12,035 ಕೊಳವೆ ಬಾವಿಗಳು ವಿದ್ಯುದೀಕರಣಕ್ಕೆ ಬಾಕಿ ಇವೆ ಎಂದು ಹೇಳಿದ್ದಾರೆ. ಮತ್ತೆ ಈ ಸಾಲಿನದು ಸೇರಿದರೆ, 18,100 ಕೊಳವೆ ಬಾವಿಗಳು ಈ ರಾಜ್ಯದಲ್ಲಿ ವಿದ್ಯುದೀಕರಣಕ್ಕೆ ಬಾಕಿ ಇವೆ ಎಂದರೆ, ಎಷ್ಟರಮಟ್ಟಿಗೆ ನಾವು ಅಲ್ಪಸಂಖ್ಯಾತರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಹಾಗೂ ಪರಿಶಿಷ್ಟ ಜನಾಂಗದವರಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ ಎಂಬುದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ? ವಂತಿಗೆಯನ್ನು ತುಂಬತಕ್ಕಂಥದರ ಬಗ್ಗೆ ಕೂಡ ನಾನು ಪ್ರಶ್ನೆ ಮಾಡಿದ್ದೆ. ಸರ್ಕಾರ ಇದರ ಬಗ್ಗೆ ಕ್ರಮ ಕೈಗೊಂಡಿದೆ ಎಂದು ತಾವು ಹೇಳಿದ್ದೀರಿ. ನಿಮ್ಮ ಸಾಮೂಹಿಕ ಗಂಗಾ ಕಲ್ಯಾಣ ಯೋಜನೆಗೆ ಯಾವುದೇ ವಂತಿಕೆಯ ಪ್ರಶ್ನೆ ಇರಲಿಲ್ಲ. ಏಕೆ ಅನುಷ್ಠಾನ ಆಗಿಲ್ಲ. ವೈಯಕ್ತಿಕ ಗಂಗಾಕಲ್ಯಾಣ ಯೋಜನೆಗೆ ವಂತಿಕೆ ಇತ್ತು. ಆದರೆ ಸರ್ಕಾರ ತುಂಬತಕ್ಕಂಥ ವ್ಯವಸ್ಥೆಯನ್ನು ನಾವೇ ಮಾಡಿದ್ದೇವೆ. ಆರ್ಥಿಕ ಇಲಾಖೆಯಿಂದ ಈ ಹಣ ಪಡೆದಿದ್ದೇವೆಂದು ಹೇಳುತ್ತೀರಿ. ಈ ಹಣವನ್ನು ತುಂಬಿ ಉಳಿದಿರತಕ್ಕಂಥ ಎಷ್ಟು ಬಾವಿಗಳನ್ನು ಎಷ್ಟು ಕಾಲದೊಳಗೆ ಒಂದು ಟೈಂಬೌಂಡ್ ಪ್ರೋಗ್ರಾಮ್‌ನ್ನು ಮಾಡಿ ಇಂಪ್ಲಿಮೆಂಟ್ ಮಾಡತಕ್ಕಂಥಾದ್ದು ಏನಾದರೂ ಈ ಸರ್ಕಾರಕ್ಕೆ ಆಲೋಚನೆ ಇದೆಯಾ?

ಶ್ರೀ ಕೆ.ಎಂ.ಕೃಷ್ಣಮೂರ್ತಿ(ಕಡೂರು): ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವರಾಂನವರು ಏನು ಹೇಳಿದರು, ವಾಸ್ತವಾಂಶವಾಗಿ ದೇವರಾಜ್ ಅರಸ್‌ರವರ ಹೆಸರಿನಲ್ಲಿ ನಡೆಯದ ಅನ್ಯಾಯ ಯಾವುದೂ ಇಲ್ಲ. ಅಷ್ಟೊಂದು ಅನ್ಯಾಯ ನಡೆಯುತ್ತಿದೆ. ಸರ್ಕಾರ ಯೂನಿಟ್ ಕಾಸ್ಟ್ ಎಂದು ಮಾಡಿದೆ, SPD ರೇಟ್ ಎಂದು ಮಾಡಿದೆ, ಆ ರೇಟ್‌ಗಿಂತ ಜಾಸ್ತಿಯಾಗಿ ಇವತ್ತು ಎಲೆಕ್ಟ್ರಿಶಿಯನ್ ಕೊಡಬೇಕಾದರೂ ಕೂಡ 12 ಸಾವಿರಕ್ಕೆ ಚಿಕ್ಕಮಗಳೂರಿನಲ್ಲಿ ವಿದ್ಯುದೀಕರಣ ಮಾಡುವುದಕ್ಕೆ ಆಗುತ್ತಿಲ್ಲ. ಅದಕ್ಕೆ ರೇವಣ್ಣನವರು ಉತ್ತರವನ್ನು ಕೊಡುತ್ತಾರೆ. ಆದರೆ ಗುಣಮಟ್ಟದ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಅದು ಎಷ್ಟನೆ ಇಸ್ವಿಯಿಂದ ಇರಬಹುದು? ಯಾವ SPD ರೇಟ್‌ಗೆ ISI ಮಾರ್ಕ್ ಇದೆ? ಅದನ್ನು ಹಾಕಿದ್ದಾರಾ? ಎಷ್ಟು ಜನ ರೈತರಿಗೆ ಅನುಕೂಲವಾಗಿದೆ. ಮಾರ್ಕೆಟ್‌ನಲ್ಲಿ ಏನು ರೇಟ್ ಇದೆ, ಇವರು ಟೆಂಡರ್ ಕರೆದಾಗ ಏನು ರೇಟ್ ಕೋಟ್ ಮಾಡಿ ಕೊಡುತ್ತಾರೆ? ಇವತ್ತು ಹಿಂದುಳಿದ ವರ್ಗದ ರೈತರಿಗೆ ಆಗಿರುವ ಅನ್ಯಾಯವನ್ನು ಸರ್ಕಾರ ವ್ಯವಸ್ಥೆಯ ಸರಿಯಾದ ಮಾನಟರಿಂಗ್ ಮಾಡದೇ ಅವರಿಗೆ ಅನ್ಯಾಯವಾಗುತ್ತಿದೆ ಎನ್ನುವ ವಿಚಾರವನ್ನು ತಮ್ಮ ಮುಖಾಂತರ ಸಚಿವರ ಗಮನಕ್ಕೆ ತರುತ್ತೇನೆ. ಇದರ ಬಗ್ಗೆ ಒಂದು ತನಿಖೆಯನ್ನು ಮಾಡಬೇಕು. 2000ನೇ ಇಸ್ವಿ ಇರಬಹುದು, 1995 ನೇ ಇಸ್ವಿ ಇರಬಹುದು. ಒಂದು C.O.D. ತನಿಖೆಯನ್ನು ನಡೆಸಿ ಯಾವ್ಯಾವ ಕ್ಷೇತ್ರದಲ್ಲಿ ಎಷ್ಟೆಷ್ಟು ಅನ್ಯಾಯವಾಗಿದೆ ಎನ್ನುವುದನ್ನು ಮಾಡದಿದ್ದರೆ, ಇದರ ಜವಾಬ್ದಾರಿಯನ್ನು ಸರ್ಕಾರ ಹೊರ ಬೇಕಾಗುತ್ತದೆ. ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದ ಇವತ್ತು ಹಿಂದುಳಿದ ವರ್ಗದ ರೈತರು ತೊಂದರೆಯನ್ನು ಅನುಭವಿಸುತ್ತಿದ್ದಾರೆ ಎನ್ನುವ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ.

ಡಾ: ಕೆ.ಅನ್ನದಾನಿ(ಮಳವಳ್ಳಿ): ಮಾನ್ಯ ಅಧ್ಯಕ್ಷರೆ, ಡಾ:ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಈ ವರ್ಷ 14 ಸಾವಿರ ಕೊಳವೆ ಬಾವಿಗಳನ್ನು 2006-07 ನೇ ಸಾಲಿನಲ್ಲಿ ಕೊರೆಯಬೇಕು. ಇದುವರೆಗೆ ಕೊರೆದಿರತಕ್ಕಂಥ ಕೊಳವೆ ಬಾವಿಗಳು ಒಂದು ಸಾವಿರ ಮಾತ್ರ. ಇನ್ನುಳಿದ 13 ಸಾವಿರ ಕೊಳವೆ ಬಾವಿಗಳನ್ನು ಯಾವಾಗ ಕೊರೆಯುತ್ತಾರೆ? ಇದರ ಗುರಿ ಮುಟ್ಟಲಿಕ್ಕೆ ಯಾವಾಗ ಸಾಧ್ಯವಾಗುತ್ತದೆ? ದಯಮಾಡಿ ಮಾನ್ಯ ಸಚಿವರು ಅದರ ಬಗ್ಗೆ ತಿಳಿಸಬೇಕಾಗುತ್ತದೆ. ಅದರ ಜೊತೆಗೆ ಟೆಂಡರ್‌ನಲ್ಲಿ ಲಾರಿಯನ್ನು ಇಟ್ಟುಕೊಂಡಿರುವವರಿಗೆ ಕೊಳವೆಬಾವಿಗಳನ್ನು ಕೊರೆಯಲು ಟೆಂಡರ್‌ನ್ನು ಕರೆಯುತ್ತಾರೆ. ಆ ಟೆಂಡರ್ ಕರೆದಿರತಕ್ಕಂಥ ಸಂದರ್ಭದಲ್ಲಿ ಟೆಂಡರ್ ಹಾಕತಕ್ಕಂಥವನು 4 ರಿಂದ 5 ಕೊಳವೆ ಬಾವಿ ಕೊರೆಯುವ ಲಾರಿಗಳನ್ನು ಇಟ್ಟುಕೊಂಡಿರಬೇಕೆಂದು ಟೆಂಡರ್ ಕಾಲ್ ಮಾಡುತ್ತಾರೆ. ಆದರೆ ಒಂದೆ ಒಂದು ಬೋರ್‌ವೆಲ್ ಇಟ್ಟುಕೊಂಡಿರತಕ್ಕಂಥವರಿಗೂ ಕೂಡ ಅಥವಾ ಲೀಜ್‌ದಿಂದ ತೆಗೆದುಕೊಂಡು ಕೊಳವೆ ಬಾವಿಗಳನ್ನು ಕೊರೆಯಬಹುದೆಂದು ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದಾರೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ 140

ಬೋರ್‌ವೆಲ್‌ಗಳನ್ನು ಕೊರೆಯಬೇಕು, ಇಲ್ಲಿಯವರೆಗೆ ಕೇವಲ 35 ಬೋರ್‌ವೆಲ್‌ಗಳನ್ನು ಕೊರೆದಿದ್ದಾರೆ, ಇನ್ನೂ 110 ಬೋರ್‌ವೆಲ್‌ಗಳನ್ನು ಯಾವಾಗ ಕೊರೆಯುತ್ತಾರೆ? ಮತ್ತೆ ಇದಾದ ಮೇಲೆ ಪಂಪ್ ಮೋಟಾರ್‌ಗಳನ್ನು ಯಾವಾಗ ಸಪ್ಲೈ ಮಾಡುತ್ತಾರೆ? ಎಷ್ಟು ಕಳಪೆ ಮಟ್ಟದ್ದು ಸಪ್ಲೈ ಮಾಡುತ್ತಿದ್ದಾರೆಂದರೆ, ಪ್ರಥಮ ಬಾರಿಗೆ ಅದರಿಂದ ನೀರನ್ನು ಆನ್ ಮಾಡಿದರೆ ಇಡೀ ಪಂಪ್ ಮೋಟಾರ್ ಬರ್ಸ್ಟ್ ಆಗುವ ಪರಿಸ್ಥಿತಿ ನಿರ್ಮಾನವಾಗಿದೆ. ಪೂರ್ತಿ ವಿದ್ಯುತ್ ಸಂಪರ್ಕ ಮತ್ತು ಕಳಪೆ ಮಟ್ಟದ ಯಂತ್ರೋಪಕರಣವನ್ನು ಇವರು ಬಳಸುತ್ತಿದ್ದಾರೆ ಮತ್ತು ಸರಬರಾಜು ಮಾಡುತ್ತಿದ್ದಾರೆ. ದಯಮಾಡಿ ಸಚಿವರು ಇತ್ತ ಕಡೆ ಗಮನವನ್ನು ಹರಿಸಬೇಕು. ಮಾನ್ಯ ಕೃಷ್ಣಮೂರ್ತಿಯವರು ಅಭಿವೃದ್ಧಿ ನಿಗಮಗಳಲ್ಲಿ ಆಗುತ್ತಿರುವ ಅನ್ಯಾಯದ ಬಗ್ಗೆ ಹೇಳಿದರು. ಅದು ಡಾ:ಅಂಬೇಡ್ಕರ್ ಅಭಿವೃದ್ಧಿ ನಿಗಮ ಇರಬಹುದು, ದೇವರಾಜ್ ಅರಸು ಅಭಿವೃದ್ಧಿ ನಿಗಮ ಇರಬಹುದು. ಈ ನಿಗಮದಲ್ಲಿ ಬಹಳಷ್ಟು ಭ್ರಷ್ಟಾಚಾರಗಳು ನಡೆಯುತ್ತಿದೆ. ಬಹಳಷ್ಟು ಕಮಿಷನ್ ತೆಗೆದುಕೊಂಡು ಕೆಲಸವನ್ನು ಮಾಡತಕ್ಕಂಥ ವ್ಯವಸ್ಥೆ ನಿರ್ಮಾಣವಾಗಿದೆ. ದಯಮಾಡಿ ಕೂಡಲೇ ಈ 13 ಸಾವಿರ ಕೊಳವೆ ಬಾವಿಗಳನ್ನು ಯಾವಾಗ ಹಾಕತಕ್ಕಂಥದ್ದಾಗುತ್ತದೆ. ಮತ್ತು 2007-08 ಕ್ಕೆ ಬಜೆಟ್‌ನ್ನು ಅನೌನ್ಸ್ ಮಾಡಿದ್ದಾರೆ. ಅದರಲ್ಲಿಯೂ 14 ಸಾವಿರ ಬೋರ್‌ವೆಲ್‌ಗಳನ್ನು ಕೊರೆಯಬೇಕಾಗುತ್ತದೆ.

ಅಧ್ಯಕ್ಷರು: ಪ್ರಶ್ನೋತ್ತರ ಕಾಲದಲ್ಲಿ ಈ ತರಹ ಇಡೀ ಕ್ಷೇತ್ರದ ಬಗ್ಗೆ ಕವರ್ ಮಾಡಿಕೊಂಡು ಹೋದರೆ ಹೇಗೆ?

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, K.E.B. deposit ಏನು ಇತ್ತು, ಜಿಲ್ಲಾ ಪಂಚಾಯತಿಯವರು ತಾಲ್ಲೂಕು ಪಂಚಾಯತಿಯವರಿಗೆ 18% ಹಣದಲ್ಲಿ ತುಂಬಿ ಎಂದು ಹೇಳಿದರೆ, ಒಬ್ಬರು payment ನ್ನು ಮಾಡಲಿಲ್ಲ ಮತ್ತು ಅದಕ್ಕೆ ಯಾವ action ಅನ್ನೂ ತೆಗೆದುಕೊಂಡಿಲ್ಲ. action ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಈ ವರ್ಷ Government ನವರು ಒಂದು ಪಾಲಿಸಿಯನ್ನು ಮಾಡಿದ್ದಾರೆ, ಅದನ್ನು ನಾನು ಒಪ್ಪುತ್ತೇನೆ. ಕಳೆದ ವರ್ಷ ಮತ್ತು ಆಚೆ ವರ್ಷದ್ದು, ನಾವು ಆಚೆ ವರ್ಷದ್ದನ್ನು ತಾಲ್ಲೂಕು ಪಂಚಾಯತಿಗಳಿಗೆ ಹೇಳಿ ಕಟ್ಟಿಸಿದ್ದೆವು. ಬಾಕಿ ಒಂದು ವರ್ಷದ್ದು ನಿಮ್ಮ ಜಿಲ್ಲಾ ಪಂಚಾಯತಿಗಳವರು ಗ್ರಾಮ ಪಂಚಾಯತಿಯವರಿಗೆ advise ಮಾಡಿಬಿಟ್ಟರು. ಯಾವುದೇ ಪಂಚಾಯತಿಯವರು ಕಟ್ಟುವುದಕ್ಕೆ ರಾಜಿಯಾಗಲಿಲ್ಲ. ಅದಕ್ಕೆ ಏನು ಮಾಡುತ್ತೀರಿ ಎನ್ನುವುದನ್ನು ತಾವು ಹೇಳಬೇಕು. K.E.B. ಗೆ ನೀವು deposit ನ್ನು ಕೊಡುತ್ತಿಲ್ಲ. ಒಬ್ಬರೂ ದುಡ್ಡು ಕಟ್ಟಿಲ್ಲ ಸರ್. ಇದನ್ನು ಸೇರಿಸಿ ನೀವು action ತೆಗೆದುಕೊಳ್ಳುತ್ತೀರಾ? Energy ಬಗ್ಗೆ ಎಷ್ಟು ದಿವಸದಿಂದ ಬಾಕಿಯನ್ನು ಕಟ್ಟಬೇಕಾಗಿದೆ? ಆ K.E.B. ವಂತಿಗೆಯನ್ನು ಮೂರು ವರ್ಷದ್ದು ಕಟ್ಟುತ್ತೀರಾ ಎನ್ನುವ ಬಗ್ಗೆ ನೀವು ಹೇಳಬೇಕು. ಒಂದು ಬೋರ್ ಕೊರೆದು

ಅದು ಫೇಲ್ ಆಗಿಬಿಟ್ಟರೆ ಯಾವ Corporation ದವರೂ ಮತ್ತೆ ಬೋರ್ ಕೊರೆಯುತ್ತಿಲ್ಲ. ಅವರು ಮುಂದಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ ಹೇಳುತ್ತಿಲ್ಲ. ಬೋರ್ ಹಾಕುತ್ತಾರೆ, ನೀರು ಬಂದಿಲ್ಲವೆಂದು ಹೋಗುತ್ತಾರೆ.

ಅಧ್ಯಕ್ಷರು: "No water, No money scheme" ನಲ್ಲಿ ಬೋರ್‌ವೆಲ್ ಕೊರೆಯಬೇಕೆಂದು ಇದೆಯಲ್ಲಾ?

ಶ್ರೀ ಟಿ.ಸಿ.ಮಾಧುಸ್ವಾಮಿ: ಸರ್ ನಾನು ಅದನ್ನೆ ಕೇಳುತ್ತಿದ್ದೇನೆ, ಅವರು ಕೊರೆಯುತ್ತಿಲ್ಲ. ಒಂದು ಬೋರ್‌ವೆಲ್ ಫೇಲಾದರೆ ಫಲಾನುಭವಿಗೆ ಇನ್ನೊಂದು ಬೋರ್‌ವೆಲ್‌ನ್ನು ಯಾರೂ ಕೊರೆದು ಕೊಟ್ಟಿಲ್ಲ. "No water No money scheme ನಲ್ಲಿ" 2–3 ಪಾಯಿಂಟ್ ಮಾಡಬೇಕು. ಒಂದು ಫೇಲಾದರೆ ಇನ್ನೊಂದು ಕೊರೆದು ಕೊಡಬೇಕು. ಮಾನ್ಯ ಕೃಷ್ಣಮೂರ್ತಿಯವರೆ, ಒಂದು ನಿಮಿಷ ನಾನು ಮಾತನಾಡುತ್ತಿದ್ದೇನೆ. ಒಂದು ಲಕ್ಷ ರೂ.ಗಳನ್ನು ಒಬ್ಬ ಫಲಾನುಭವಿಗೆ ಆಯ್ಕೆ ಮಾಡಿ ಕೊಡುತ್ತೇವೆ. ಬೋರ್‌ವೆಲ್ ಫೇಲಾಯಿತು ಎಂದು ಅವನು ಹೋಗುತ್ತಾನೆ. ಮುಂದಕ್ಕೆ ಏನು ಮಾಡಬೇಕೆಂದು ಹೇಳಲಿಲ್ಲ. ಬೋರ್‌ವೆಲ್ ಫೇಲಾದಾಗ 2–3 ನೇ ಪಾಯಿಂಟ್‌ಗೂ ಅವಕಾಶವನ್ನು ಮಾಡಿಕೊಡಬೇಕು. ತುಮಕೂರು, ಕೋಲಾರ್, ಚಿತ್ರದುರ್ಗ ಜಿಲ್ಲೆಗಳಲ್ಲಿ 400 ಅಡಿಗೆ ನೀರು ಸಿಗುವುದಿಲ್ಲ. ಇವರು 400 ಅಡಿ ಕೊರೆದಿದ್ದೇವೆ ನೀರು ಸಿಗಲಿಲ್ಲವೆಂದು ಬರುತ್ತಾರೆ. 600–700 ಅಡಿ ಕೊರೆಸುವುದಕ್ಕೆ ತಾವು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳಿ ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜು(ವಿರಾಜಪೇಟೆ): ಮಾನ್ಯ ಅಧ್ಯಕ್ಷರೆ, ನಾನು ತಾಂತ್ರಿಕ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಒಂದು ಕೊಳವೆಬಾವಿಯನ್ನು ಕೊರೆದರೆ ಒಂದು ವರ್ಷದಲ್ಲಿ ಅದಕ್ಕೆ ವಿದ್ಯುತ್ ಸಂಪರ್ಕವನ್ನು ಕೊಟ್ಟು ಅದನ್ನು ಉಪಯೋಗ ಮಾಡಿಕೊಳ್ಳಲಿಲ್ಲವೆಂದರೆ maximum ಆಗಿ ಕೊರೆದಿರುವ ಬಾವಿಗಳು ನಿರುಪಯುಕ್ತವಾಗುತ್ತವೆ. ಈ ಒಂದು ಅಂಶವನ್ನು ಏಕೆ ನಮ್ಮ ಅಧಿಕಾರಿಗಳು ಮನಗಂಡಿಲ್ಲವೆನ್ನುವುದು ನನಗೆ ಅರ್ಥವಾಗುತ್ತಿಲ್ಲ. 2001 ರಲ್ಲಿಯೇ ಕೊರೆದಿರುವಂಥ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಒದಗಿಸದೆ ಅವುಗಳು ನಿರುಪಯುಕ್ತವಾಗಿರುವ ಸಂಭವ ಬಹಳ ಇದೆ. ಈ ತರಹ ಆದರೆ ಅದಕ್ಕೆ ಯಾರು ಜವಾಬ್ದಾರರು? ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಎನ್ನುವಂಥಾದ್ದನ್ನು ಹೇಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಎಂ.ವಿಶ್ವನಾಥ(ಸಕಲೇಶಪುರ): ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ 150 ಬೋರ್‌ವೆಲ್‌ಗಳನ್ನು ಕೊರೆಯಬೇಕಾಗಿತ್ತು. ಇನ್ನೂವರೆಗೆ ಒಂದು ಬೋರ್‌ವೆಲ್ ಕೂಡ ಕೊರೆದಿಲ್ಲ. ಡಾ: ಅಂಬೇಡ್ಕರ್ ಅಭಿವೃದ್ಧಿ ನಿಗಮ ಇರಬಹುದು, ಹಿಂದುಳಿದ ವರ್ಗದ ನಿಗಮದಿಂದ ಕೊರೆಯಬೇಕಾದ್ದೂ ಕೂಡ ಕೊರೆದಿಲ್ಲ. ನಾವು

ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇವೆ. ಕೆಲವೊಂದು ಕಡೆ ಲಾರಿಗಳು ಹೋಗದಿರುವ ಪರಿಸ್ಥಿತಿ ಕೂಡ ಇದೆ. ಕಳೆದ ವರ್ಷ ಹಾಗೂ ಅದರ ಹಿಂದಿನ ವರ್ಷದ್ದು ಬಾಕಿ ಇದೆ. ನಾವು ಪ್ರತಿ ವರ್ಷ 150 ರಿಂದ 200 ರವರೆಗೆ ಬೋರ್‌ವೆಲ್‌ಗಳನ್ನು ಕೊಡುತ್ತೇವೆಂದು ಹೇಳುತ್ತಿರುತ್ತಾರೆ.

(ಗೊಂದಲ)

ಅಧ್ಯಕ್ಷರು: ಈಗ ಪ್ರತಿಯೊಬ್ಬರ ಪ್ರಶ್ನೆಗೂ ಹತ್ತಾರು ಸಮಸ್ಯೆಗಳು ನಿಮ್ಮ ಕ್ಷೇತ್ರದಲ್ಲಿ ಇವೆ. ಎಲ್ಲರೂ ಪ್ರಶ್ನೆಗಳನ್ನು ಕೇಳಬೇಕೆಂದರೆ ಹೇಗೆ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಹೋದವರ್ಷ ಹಾಕಿರುವ ಬೋರ್‌ವೆಲ್‌ಗಳಿಗೆ ಪಂಪ್‌ಸೆಟ್‌ನ್ನು ಕೊಟ್ಟಿಲ್ಲ. ಅದರ ಬಗ್ಗೆ ಹೇಳಬೇಕು.

ಅಧ್ಯಕ್ಷರು: ಸಮಸ್ಯೆಗಳು ಸಾವಿರೆಂಟು ಇದ್ದಾವೆ. ಈಗ ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು, ಇದು ಬಹಳ ಗಂಭೀರವಾದ ವಿಷಯವಾಗಿರುವುದರಿಂದ SC:ST Corporation ಮತ್ತು ದೇವರಾಜ ಅರಸು ಅಭಿವೃದ್ಧಿ ನಿಗಮ ಇವುಗಳ ಬಗ್ಗೆ ಮಾನ್ಯ ಸದಸ್ಯರುಗಳು ಗಂಭೀರವಾದ ಆಪಾದನೆಯನ್ನು ಮಾಡಿದ್ದಾರೆ.

ಡಾ: ಕೆ.ಅನ್ನದಾನಿ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅರ್ಧಗಂಟೆ ಕಾಲವಾಕಾಶ ಕೊಡಬೇಕು. ಏಕೆಂದರೆ ಬಹಳಷ್ಟು ಸಮಸ್ಯೆಗಳು ಇವೆ.

(ಗೊಂದಲ)

ಅಧ್ಯಕ್ಷರು: ನಾನು ಚರ್ಚೆಗೆ ಅವಕಾಶವನ್ನು ಮಾಡಿ ಕೊಡುತ್ತೇನೆ. ಆದರೆ ಹೀಗೆ ಎಲ್ಲರೂ ನಿಂತುಕೊಂಡರೆ ಹೇಗೆ? ಈಗ ಸಮಯ 12.40 ಆಗಿ ಹೋಯಿತು. ಈಗ ಬರೀ ಪ್ರಶ್ನೋತ್ತರವನ್ನು ನಡೆಸಿದಂತಾಗಿದೆ.

ಶ್ರೀ ಬಿ.ಶಿವರಾಂ: ಮಾನ್ಯ ಅಧ್ಯಕ್ಷರೇ ತಾವು ಉತ್ತರವನ್ನು ಕೊಡಿಸಿ.

ಅಧ್ಯಕ್ಷರು: ಅದಕ್ಕಾಗಿಯೆ ಉತ್ತರವನ್ನು ಕೊಡುವುದಕ್ಕೆ ಹೇಳುತ್ತಿದ್ದೇನೆ.

ಶ್ರೀ ಬಿ.ಶಿವರಾಂ: ಉತ್ತರವನ್ನು ಕೊಡುವುದಕ್ಕೆ ಹೇಳಿ.

ಅಧ್ಯಕ್ಷರು: ದಯಮಾಡಿ ಉತ್ತರವನ್ನು ಕೊಡಿ.

ಡಾ: ಕೆ.ಅನ್ನದಾನಿ: ಉತ್ತರವನ್ನು ಕೊಡಲಿ.

ಅಧ್ಯಕ್ಷರು: ಈಗ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

ಅಧ್ಯಕರು: ಈಗ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ಬಾಲಚಂದ್ರ ಲ. ಜಾರಕಿಹೋಳಿ: ಮೂಲ ಪ್ರಶ್ನೆಯನ್ನು ಮಾನ್ಯ ಸದಸ್ಯರಾದ ಶಿವರಾಮುರವರು ಕೇಳಿದ್ದರು.

ಅಧ್ಯಕ್ಷರು: ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡೋಣ ಈಗ ಮಾನ್ಯ ಸಚಿವರು ಉತ್ತರವನ್ನು ಕೊಡಲಿ.

ಶ್ರೀ ಬಾಲಚಂದ್ರ ಲ ಜಾರಕಿಹೋಳಿ: ಈಗ ಒಟ್ಟಿಗೆ 20 ಜನರು ಕೇಳಿದರೆ ನಾನು ಉತ್ತರವನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ. ನಾನು ಏನು/ಹೇಳುವುದಕ್ಕಾಗುವುದಿಲ್ಲ. ಮೂಲ ಪ್ರಶ್ನೆಯನ್ನು ಕೇಳಿರುವವರನ್ನು ಬಿಟ್ಟು, ಒಟ್ಟಿಗೆ

ಎಲ್ಲರೂ ಕೇಳಿದರೆ ನಾನು ಯಾರಿಗೂ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ದಯಮಾಡಿ ನಾನು ಎಲ್ಲರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಇದು ಎಲ್ಲಾ ತಾಲ್ಲೂಕಿನಲ್ಲಿಯೂ ಕೂಡ ಸಮಸ್ಯೆ ಇದೆ. ಬರೀ ಶಿವರಾಂರವರ ತಾಲ್ಲೂಕಿನಲ್ಲಿ ಮಾತ್ರ ಇಲ್ಲ.

ಅಧ್ಯಕ್ಷರು: ಮಾನ್ಯ ಕೃಷ್ಣಮೂರ್ತಿಯವರೆ, ನೀವೇನು ಕುಸ್ತಿ ಮಾಡುತ್ತಿದ್ದೀರಾ?

(ಗೊಂದಲ)

ಶ್ರೀ ಕೆ.ಎಂ.ಕೃಷ್ಣಮೂರ್ತಿ: ತಾವು ಉತ್ತರವನ್ನು ಹೇಳುವುದಕ್ಕೆ ಬಿಡದಿದ್ದರೆ ಅದು ಹೇಗಾಗುತ್ತದೆ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ: ಮಾನ್ಯ ಸದಸ್ಯರಾದ ಶಿವರಾಂರವರು....

ಅಧ್ಯಕರು: ಮಾನ್ಯ ಸಚಿವರೆ, ನಿಮ್ಮ ಇಲಾಖೆಯ ಬಗ್ಗೆ ಅನೇಕ ಆಪಾದನೆಗಳನ್ನು ಮಾನ್ಯ ಸದಸ್ಯರುಗಳು ಮಾಡಿದ್ದಾರೆ, ಬಹಳ ದಿವಸಗಳಿಂದಲೂ ಅದು ಇದೆ. ಆ ಆಪಾದನೆಗಳು ಗಂಭೀರವಾಗಿದೆ. ನೀವು ಬಹಳ ಪ್ರಯತ್ನ ಮಾಡಿ ಮುಂದೆ ಮುಂದೆ ಹೆಜ್ಜೆಯನ್ನು ಹಾಕುತ್ತಿದ್ದೀರಿ. ಅದರೆ ತಕ್ಷಣ ಒಂದು ತನಿಖೆಯನ್ನು ಮಾಡಿಸಿ ಈ ಸದನದ ಮುಂದೆ ರಿಪೋರ್ಟ್‌ನ್ನು ಇಡಿ ಇದರ ಬಗ್ಗೆ ತನಿಖೆ ಅಗತ್ಯವಾಗಿದೆ.

ಶ್ರೀ ಬಿ.ಶಿವರಾಂ: ನಮ್ಮ ಸೀಮಿತವಾದ ಪ್ರಶ್ನೆಗೆ ಸೀಮಿತವಾದ ಉತ್ತರವನ್ನು ಹೇಳಬೇಕು.

ಶ್ರೀ ಬಾಲಚಂದ್ರ ಲ ಜಾರಕಿಹೊಳಿ: ಮಾನ್ಯ ಸದಸ್ಯರಾದ ಶಿವರಾಂರವರು SC:ST, Backward Classes ನಲ್ಲಿ 12 ಸಾವಿರ ಸೇರಿ ಒಟ್ಟು 18 ಸಾವಿರ ವಿದ್ಯುದೀಕರಣ ಬಾಕಿ ಇದೆ. ಅದರ ಬಗ್ಗೆ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದರು, ಈ ವರ್ಷದ್ದು ಬಿಟ್ಟು total 14000 ಬೋರ್‌ವೆಲ್ ವಿದ್ಯದೀಕರಣದ ಬಾಕಿ ಪೆಂಡಿಂಗ್ ಉಳಿದಿದೆ. ಅದಕ್ಕೆ ಸರ್ಕಾರದಿಂದ ಈಗಾಗಲೇ 9.39 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದೇವೆ. 7.5. ಹೆಚ್.ಪಿ ಮೋಟಾರ್‌ಗೆ 7500 ರೂಪಾಯಿಗಳನ್ನು ಡೆಪಾಸಿಟ್‌ನ್ನು ಕಟ್ಟಬೇಕಾಗುತ್ತದೆ. 5 ಹೆಚ್‌ಪಿ ಮೋಟಾರ್‌ಗೆ 5500 ಹಣವನ್ನು ಕಟ್ಟಬೇಕಾಗುತ್ತದೆ. 14000ಕ್ಕೆ ಆಗುವಂತಹ ಹಣವನ್ನು ಈ ಸರ್ಕಾರವು ಕಟ್ಟುತ್ತಿದೆ ಅದರ ಬಗ್ಗೆ ಯಾವ ಸದಸ್ಯರೂ ಕಳವಳವನ್ನು ವ್ಯಕ್ತಪಡಿಸುವಂತಹ ಅಗತ್ಯವಿಲ್ಲ. ಈಗ ವಿದ್ಯುತ್ ಇಲಾಖೆಯ ಬಗ್ಗೆ, ಹಣಕಾಸಿನ ಇಲಾಖೆಯ ಬಗ್ಗೆ ನಾವು ಸಂಪರ್ಕವನ್ನು ಇಟ್ಟುಕೊಂಡಿದ್ದೇವೆ. ಇದರ ಬಗ್ಗೆ ಮುಂದಿನ ಕೆಲಸವನ್ನು ನಮ್ಮ ಇಂಧನ ಇಲಾಖೆಯವರು ಮಾಡಬೇಕಾಗುತ್ತದೆ. ನಾವು ಡೆಫಾಸಿಟ್‌ನ್ನು ಕಟ್ಟಿದ ನಂತರ ಮುಂದಿನ ಕೆಲಸವನ್ನು ಅವರು ಮಾಡಬೇಕಾಗುತ್ತದೆ. ಈಗಾಗಲೆ ಮಾನ್ಯ ಸಚಿವರಲ್ಲಿ ಹಾಗೂ ಹಣಕಾಸಿನ ಸಚಿವರಲ್ಲಿ ಇದರ ಬಗ್ಗೆ ಚರ್ಚೆ ಮಾಡತ್ತಿದ್ದೇವೆ. ಇದರ ಬಗ್ಗೆ ಮುಂದೆ ಈ ರೀತಿಯಾಗಿ ತೊಂದರೆಯಾಗದಂತೆ

ಸರ್ಕಾರ ಖಂಡಿತವಾಗಿ ಕ್ರಮವನ್ನು ತೆಗೆದುಕೊಳ್ಳುತ್ತದೆ. Unit costನ್ನು 1 ಲಕ್ಷ ಜಾಸ್ತಿ ಮಾಡಿದ್ದರಿಂದ ಮುಂದಿನ ದಿನಗಳಲ್ಲಿ ಈ ಸಮಸ್ಯೆಗಳು ಬರುವುದಿಲ್ಲ. ಕೆಲವೊಂದು ಜನರು ವೈಯಕ್ತಿಕವಾಗಿ ಕೇಳಿದರು, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅಂತಹ ಸಮಸ್ಯೆಗಳು ಇದ್ದರೆ ನಮಗೆ ಪತ್ರವನ್ನು ಕೊಟ್ಟರೆ ಅದನ್ನು ನಾವು ಖಂಡಿತವಾಗಿ ಸರಿಪಡಿಸಿಕೊಳ್ಳುತ್ತೇವೆ. ಏಕೆಂದರೆ ಕೆಲವು ಜನರು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡಬಾರದು. ಮಾನ್ಯ ಸದಸ್ಯರಾದ ಡಾ. ಅನ್ನದಾನಿಯವರು SC:ST Corporationನಲ್ಲಿ ಕೇವಲ 1 ಸಾವಿರ ಬೋರ್‌ವೆಲ್‌ನ್ನು ಕೊರೆದಿದ್ದಾರೆಂದು ಹೇಳಿದರು. ಅಲ್ಲಿ 1 ಸಾವಿರ ಬೋರ್‌ವೆಲ್ ಅಲ್ಲ, ಇನ್ನೂ ಜಾಸ್ತಿ ಮಾಡಿದ್ದೇವೆ. ಅದರ ಬಗ್ಗೆ ಸಮರ್ಪಕವಾದ ಉತ್ತರ ಬೇಕೆಂದರೆ ಅದರ ಬಗ್ಗೆ ಅವರು ಪ್ರಶ್ನೆಯನ್ನು ಕೇಳಲಿ, ಅದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ. ಇನ್ನು ನಿಗಮದ ಬಗ್ಗೆ ನಡೆದಿರುವಂತಹ ಹಣಕಾಸಿನ ಅವ್ಯವಹಾರದ ಬಗ್ಗೆ ಹೇಳಿದ್ದಾರೆ ಅದರ ಬಗ್ಗೆ ತನಿಖೆಯನ್ನು ಮಾಡಿ ವರದಿಯನ್ನು ಕೊಡುತ್ತೇನೆ.

ಅಧ್ಯಕ್ಷರು: ಮಾನ್ಯ ಶಿವರಾಮುರವರೆ, ಮಾನ್ಯ ಸಚಿವರು ವಿವರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಈಗ 12.45 ಗಂಟೆಯಾಗಿದೆ. ಈಗ ಪ್ರಶ್ನೋತ್ತರ ಕಾಲದಲ್ಲಿ ಇಷ್ಟೊಂದು ಜನರಿಗೆ ಅವಕಾಶವನ್ನು ಕೊಟ್ಟರೆ ಸರಿಯಾಗುವುದಿಲ್ಲ. ಇದರ ಬಗ್ಗೆ ಮೂಲ ಪ್ರಶ್ನೆಯವರು ಕೇಳಬೇಕಾಗುತ್ತದೆ.

ಶ್ರೀ ಬಿ.ಶಿವರಾಂ: ನನಗೆ ಅರ್ಥವಾಗುತ್ತದೆ, ಮೂಲ ಪ್ರಶ್ನೆಯನ್ನು ಕೇಳಿದವರಿಗೆ supplementary ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವನ್ನು ಕೊಡದಿದ್ದರೆ ಹೇಗೆ? ನನಗೆ ಮಾತನಾಡುವುದಕ್ಕೆ ತಾವು ಸಮಯವನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು: ಇದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಿದೆ. ಮಾನ್ಯ ಸಚಿವರು ಇದರ ಬಗ್ಗೆ ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ನಿಮ್ಮ ಪರವಾಗಿ ನಾನು ತನಿಖೆ ಮಾಡಿ ಎಂದು ಹೇಳಿದ್ದೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಇದರ ಬಗ್ಗೆ ಮಾನ್ಯ ರೇವಣ್ಣನವರು ಉತ್ತರವನ್ನು ಹೇಳಲಿ.

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆಂದರೆ ನನ್ನದೇನೂ ಅಡ್ಡಿಯಿಲ್ಲ. ಈಗ ಅಯಿತು, ಶಿವರಾಮುರವರೆ, ಮುಂದಕ್ಕೆ ಹೋಗೋಣ. ಇಲ್ಲದಿದ್ದರೆ, there is no end. ಮಾನ್ಯ ಬಸವರಾಜರಾಯರೆಡ್ಡಿ .....

ಶ್ರೀ ಕೆ.ಎಂ.ಕೃಷ್ಣಮುರ್ತಿ: ಇಂಧನ ಸಚಿವರು ಉತ್ತರವನ್ನು ಕೊಡಲಿ,

ಅಧ್ಯಕ್ಷರು: ಅವರು ಉತ್ತರವನ್ನು ಕೊಡಬೇಕೆಂದು ನಾನು ಹೇಳುವುದಕ್ಕಾಗುತ್ತದೆಯೇ? ಈ ಪ್ರಶ್ನೆ ಸಮಾಜಕಲ್ಯಾಣ ಸಚಿವರ ಹೆಸರಿನಲ್ಲಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೇ,....

ಶ್ರೀ ಬಿ. ಶಿವರಾಂ: ಮಾನ್ಯ ಗುರುಪಾದಪ್ಪನವರೇ ಒಂದು ನಿಮಿಷ ತಾಳಿ. ನಾನು ಒಂದೇ ಸಾರಿ ಪ್ರಶ್ನೆಯನ್ನು ಕೇಳಿರುವುದು. ಮುಂದೆ ಕೇಳುವುದಕ್ಕೆ ಹೋಗಲಿಲ್ಲ. ತಾವು 9 ಕೋಟಿ 39 ಲಕ್ಷ ಹಣವನ್ನು ಹಿಂದಿನ ಬಾಕಿ ವಂತಿಗೆಯನ್ನು ಫಲಾನುಭವಿಗಳಿಗೆ ಕೊಡಬೇಕಾಗಿತ್ತೋ ಅದನ್ನು ಮಂಜೂರಾತಿ ಮಾಡಿ ವಿದ್ಯುತ್ ಇಲಾಖೆಗೆ ತಾವು ಕಳುಹಿಸಿದ್ದೇವೆಂದು ತಮ್ಮ ಉತ್ತರದಲ್ಲಿ ಇದೆ. ಈ ಸಾಲಿಗೆ ತಾವು ಪ್ರತಿ ಯೋಜನೆಗೂ ಕೂಡ 75 ಸಾವಿರ ದಿಂದ 1 ಲಕ್ಷಕ್ಕೆ ಏರಿಸಿದರೆ ಮುಂದೆ ಆ ಸಮಸ್ಯೆ ಇಲ್ಲ. ಅದರ ಜೊತೆಗೆ ಸಾಕಷ್ಟು ಹಣವನ್ನು ರೈತರು ವಂತಿಗೆಯ ರೂಪದಲ್ಲಿ ತುಂಬಿದ್ದರೂ ಕೂಡ ವಿದ್ಯುಚ್ಛಕ್ತಿ ಇಲಾಖೆಯಿಂದ ಅದು ಪರಿಪೂರ್ಣವಾಗಿ ಅನುಷ್ಠಾನಗೊಳ್ಳುವುದಕ್ಕೆ ಆಗಲಿಲ್ಲ. ಸಾಮಾಗ್ರಿಯ ಕೊರತೆ ಇದೆಯೋ, ಮತ್ತೊಂದು ಇದೆಯೋ ಅದು ನನಗೆ ಗೊತ್ತಿಲ್ಲ. ಒಟ್ಟಾರೆ ಇರತಕ್ಕಂತಹ ಸುದೀರ್ಘವಾದ ಮಾಹಿತಿಯನ್ನು ತಾವು ಒದಗಿಸಿದ್ದೀರಿ, ಮತ್ತೊಂದು ವರದಿಯ ಅವಶ್ಯಕತೆ ಇಲ್ಲ. ಆದರೆ ವಿದ್ಯುಚ್ಛಕ್ತಿ ಇಲಾಖೆಯಿಂದಲೂ ಕೂಡ ವಂತಿಗೆಯನ್ನು ತುಂಬಿರತಕ್ಕಂತಹ ಬಾವಿಗಳಿಗೆ ಇನ್ನೂ ವಿದ್ಯುತ್ ಸಂಪರ್ಕವನ್ನು ಒದಗಿಸದೇ ಇರುವುದರಿಂದ time bound programmeನ್ನು ಏನಾದರೂ ತಾವು implement ಮಾಡುವುದಕ್ಕೆ ಸಾಧ್ಯತೆ ಇದೆಯೇ? ವಂತಿಗೆಯನ್ನು ತುಂಬಿದರೆ ಇಷ್ಟು ದಿವಸದೊಳಗೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ಗಂಗಾಕಲ್ಯಾಣ ಯೋಜನೆಗೆ ನಾವು ಕೊಡುತ್ತೇವೆನ್ನುವಂತಹ time bound programme ನ್ನು ತಾವು ಪ್ರಕಟಣೆ ಮಾಡಿದರೆ ಆ ಫಲಾನುಭವಿಗೆ ನಿಜವಾದಂತಹ ಸೌಲಭ್ಯ ದೊರೆಯುತ್ತದೆ. ಇದರ ಜೊತೆಗೆ ನಮ್ಮ ಸ್ನೇಹಿತರು ಈಗಾಗಲೇ ಹೇಳಿದರು. 2001–02, 2002–03ರಲ್ಲಿ ಕೊರೆದಂತಹ ಬಾವಿಗಳಿಗೆ ಈಗಾಗಲೆ ನೀರು ಇದೆಯೋ ಇಲ್ಲವೋ ಎನ್ನುವಂತಹ ಪ್ರಶ್ನೆ ರೈತರಿಗೆ ಉದ್ಭವಿಸುವುದಿಲ್ಲವೋ? ಆದ್ದರಿಂದ ತಾವು ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.

ಅಧ್ಯಕ್ಷರು: ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿ. ಈ ಪ್ರಶ್ನೆ ಬಹಳ ಲೇಟಾಯಿತು.

ಶ್ರೀ ಹೆಚ್.ಡಿ.ರೇವಣ್ಣ: ಸುಮಾರು 2000ನೇ ಇಸವಿಯಿಂದ 6229 ಅರ್ಜಿ ನಮ್ಮ ಹತ್ತಿರ ಬಾಕಿ ಇತ್ತು. ಅಂದರೆ 4 ವರ್ಷಗಳಿಂದ ಕೆಲಸವನ್ನು ಮಾಡಿರಲಿಲ್ಲ. ನಾನು ಬಂದ ಮೇಲೆ ಕಳೆದ 3 ವರ್ಷಗಳಲ್ಲಿ Ambedkar Development Corporationನಲ್ಲಿ ಸುಮಾರು 6629 ಅರ್ಜಿಯಲ್ಲಿ 5219ಕ್ಕೆ electricityಯನ್ನು ಕೊಟ್ಟಿದ್ದೇವೆ. ಅದೇ ರೀತಿಯಾಗಿ ದೇವರಾಜ ಅರಸ್ ಬ್ಯಾಕ್‌ವರ್ಡ್ ಕ್ಲಾಸ್ ಕಾರ್ಪೋರೇಷನ್‌ಗೆ 31.12.2004ಕ್ಕೆ ಸುಮಾರು 1739 ಅರ್ಜಿ ಇತ್ತು. ಅದರಲ್ಲಿ ಸುಮಾರು 856ಕ್ಕೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿದ್ದೇವೆ. ಅದೇ ರೀತಿಯಾಗಿ 829 ಇತ್ತು karnataka Minority Development Corporationನಲ್ಲಿ, ಅದರಲ್ಲಿ 453ಕ್ಕೆ ಕೊಟ್ಟಿದ್ದೇವೆ. ಒಟ್ಟು 8837ರಲ್ಲಿ ನಾವು ಕಳೆದ 4 ವರ್ಷಗಳಿಂದ ಪೆಂಡಿಂಗ್

ಇದ್ದಂತಹದ್ದನ್ನು ಸುಮಾರು 6528 ಕೊಟ್ಟಿದ್ದೇವೆ. ಇದರಲ್ಲಿ ಏನಾಗಿದೆ ಎಂದರೆ, ಕಾರ್ಪೋರೇಷನ್ ನಿಂದ ನಮಗೆ 14000 ಅರ್ಜಿ ಬಂದಿಲ್ಲ. 8334 ಅರ್ಜಿಗಳು ಮಾತ್ರ ಬಂದಿದೆ. ಬಂದಿರುವ ಅರ್ಜಿಗಳ ಬಗ್ಗೆ ನಾವು ಕೆಲಸವನ್ನು ಮಾಡಿಕೊಟ್ಟಿದ್ದೇವೆ. ಬಾಕಿ ಇರುವುದನ್ನು ಕಾರ್ಪೋರೇಷನ್‌ನಲ್ಲಿ 1 ಲಕ್ಷದಲ್ಲಿ.... ಕೆಲವು ಕಡೆ ನಮಗೆ ಬಂದಿರುವ ಮಾಹಿತಿಯ ಪ್ರಕಾರ ಒಂದೊಂದು ಕಡೆ ಕಂಬ, ಬಾವಿ ಕೊರೆಯುತ್ತಿರುವ ಕಡೆ ಅಲ್ಲಿ 18–20 ಬರುತ್ತದೆ. ಅಲ್ಲಿ 2 ರಿಂದ 3 ಲಕ್ಷ ವೆಚ್ಚ ಎಂದು ಬರುತ್ತದೆ. ಆ 3 ಲಕ್ಷ ವೆಚ್ಚ ಇರುವ ಕಡೆಗಳಲ್ಲಿ ನಾವು ಮಾಡುವುದಕ್ಕಾಗುವುದಿಲ್ಲ. 1 ಲಕ್ಷ ಲಿಮಿಟೇಶನ್‌ನಲ್ಲಿ ಯಾರು ಕಟ್ಟುತ್ತಾರೆ ಅಷ್ಟರೊಳಗೆ ಇರುವುದರ ಬಗ್ಗೆ ನಾವು time bound programme ಪ್ರಕಾರ ಕೆಲಸವನ್ನು ಮಾಡಿಸಿಕೊಡುತ್ತೇನೆ.

ಶ್ರೀ ಬಿ.ಶಿವರಾಂ: ಈಗ ಮಾನ್ಯ ಸಚಿವರ ಉತ್ತರದಿಂದ ತಮಗೆ ಮನವರಿಕೆಯಾಯಿತು ಎಂದು ಕಾಣಿಸುತ್ತದೆ. ಏನು ಕಡಿಮೆ ಅಂದಾಜು ಮೊತ್ತ if the estimated cost is less than Rs.25 or 50 thousand, ಅಂತಹವುಗಳನ್ನು ನಾವು ಮಾಡುತ್ತೇವೆ. ದೂರದಲ್ಲಿ ಕೊರೆದಿರುವುದು, ವಿದ್ಯುದೀಕರಣಕ್ಕಾಗಿ ಒಂದು, ಒಂದೂವರೆ, 2 ಲಕ್ಷ ಇರುವುದನ್ನು ಮಾಡುವುದಕ್ಕಾಗುವುದಿಲ್ಲವೆಂದು ನೇರವಾಗಿ ಮಾನ್ಯ ಸಚಿವರು ಉತ್ತರವನ್ನು ಕೊಟ್ಟರು. ಅಂತಹ ಸಮಸ್ಯೆಗಳು ಇದ್ದರೆ ಅದನ್ನು ಹೇಗೆ ಬಗೆಹರಿಸುತ್ತೀರಿ? ಇದರ ಬಗ್ಗೆ ತಾವು ಬಹಳ ತೀವ್ರವಾಗಿ ಯೋಚನೆಯನ್ನು ಮಾಡಬೇಕಾಗುತ್ತದೆ. ರೈತರ ಬಾವಿಗಳು ಎಲ್ಲೆಲ್ಲಿ ಇದೆ, ಅವರಿಗೆ ಬಾವಿಗಳನ್ನು ಕೊರೆದು ದುಡ್ಡಂತೂ ಕೊಟ್ಟಾಯಿತು. ಇವತ್ತು estimate cost KEB ಪ್ರಕಾರ ಇವತ್ತಿನ new S.R. ಪ್ರಕಾರ 1 ಲಕ್ಷ, ಒಂದೂವರೆ ಲಕ್ಷ 2 ಲಕ್ಷದವರೆಗೂ ಹೋಗುತ್ತಿದೆ. ಈ ಕಾರಣಕ್ಕಾಗಿಯೇ ಬಾಕಿ ಇದೆ ಎಂದು ನನ್ನ ಮೂಲಭೂತವಾದಂತಹ ಪ್ರಶ್ನೆಯಾಗಿದೆ. ತಾವು 25 ಸಾವಿರ ರೂ.ಗಳನ್ನು ವಂತಿಗೆಯ ರೂಪದಲ್ಲಿ ಫಲಾನುಭವಿಯ ಪರವಾಗಿ ತಾವು ನಿಗಮಕ್ಕೆ ತುಂಬಿದರೂ ಕೂಡ estimated cost ಜಾಸ್ತಿ ಇರುವಂತಹ ಸಂದರ್ಭದಲ್ಲಿ.....

ಶ್ರೀ ಹೆಚ್.ಡಿ.ರೇವಣ್ಣ: ಬೇರೆ ತರಹ ಅರ್ಥವನ್ನು ತಾವು ಕಲ್ಪಿಸಬೇಡಿ. ಕಳೆದ 4 ವರ್ಷಗಳಿಂದ ಹಾಗೆಯೇ ಇರುವುದನ್ನು ನಾನು ಬರೀ ಕೇವಲ 30 ತಿಂಗಳಲ್ಲಿ ಮಾಡಿಕೊಟ್ಟಿದ್ದೇವೆ. ಅದು ಇಲ್ಲಿ ನಿಮ್ಮ ಉತ್ತರದಲ್ಲಿಯೇ ಬಂದಿದೆ. 10 ವರ್ಷಗಳಿಂದ ಕೊಡುತ್ತಿದ್ದೇವೆ. ನಾವು 30 ತಿಂಗಳಲ್ಲಿ ಕೆಲಸವನ್ನು ಮಾಡಿಕೊಟ್ಟಿದ್ದೇವೆ. ಕೆಲವು estimateಗಳು 1 ಲಕ್ಷದ ಮೇಲೆ ಬಂದರೆ ನಾನು ಏನು ಮಾಡುವುದಕ್ಕಾಗುತ್ತದೆ? ಏನಾದರೂ 10 ರಿಂದ 25 ಸಾವಿರ ಇದ್ದರೆ ನಾನು ನಮ್ಮ ಇಲಾಖೆಯವರಿಗೆ ಹೇಳಿ ಅದನ್ನು ನಾನು ಮಾಡಿಸಬಹುದು. ಒಂದೊಂದು ಕಡೆ 20 ಕಂಬಗಳನ್ನು ಹಾಕಬೇಕು.

ಬಾವಿಯನ್ನು ಕೊರೆಯದಿರುವ ಜಾಗಕ್ಕೂ 20 ಕಂಬವನ್ನು ಹಾಕಿದರೆ ಏನು ಮಾಡುವುದಕ್ಕಾಗುತ್ತದೆ? ಇಲಾಖೆಯವರು ಫಲಾನುಭವಿಗಳನ್ನು ಆಯ್ಕೆ ಮಾಡುವಂತಹ ಸಂದರ್ಭದಲ್ಲಿ within limitationನಲ್ಲಿ ಮಾಡಿದರೆ ಸೂಕ್ತ ಎಂದು ಅದು ನನ್ನ ಭಾವನೆ, ಅದರ ಮೇಲೆ ಅವರ ಇಲಾಖೆಗೆ ಸಂಬಂಧಪಟ್ಟಿರುವುದು.

ಅಧ್ಯಕ್ಷರು: ಆಯಿತು, ಮುಂದಕ್ಕೆ ಹೋಗೋಣ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದು serious matter.

ಅಧ್ಯಕ್ಷರು: ಇದರಲ್ಲಿ ಎಲ್ಲಾ ಸೀರಿಯಸೇ.

(ಗೊಂದಲ)

ಅಧ್ಯಕ್ಷರೇ: ರೈತರ ಐ.ಪಿ.ಸೆಟ್‌ಗೆ ವಿದ್ಯುಚ್ಛಕ್ತಿ ಕೊಡಲಿಕ್ಕೆ ಇಷ್ಟೇ ಕಂಬಗಳಲಿದ್ದರೆ ಕೊಡುತ್ತೇವೆಂದು ಇಷ್ಟೇ ಎಸ್ಟಿಮೇಟ್‌ನಲ್ಲಿದ್ದರೆ ಕೊಡುತ್ತೇವೆ ಎಂದು ಏನಾದರೂ ಸರ್ಕಾರ ಪಾಲಿಸಿ ಮಾಡಿದೆಯೇ ಎಂಬುದು ನಮಗೆ ಗೊತ್ತಾಗಬೇಕು. ನಾಳೆ ಇದೇ ಕೆಲಸ ಬೇರೆಯವರಿಗೂ ಐ.ಪಿ.ಸೆಟ್‌ಗೂ ಕನೆಕ್ಷನ್ ಕೊಡುವುದಿಲ್ಲವೆಂದರೆ ನಾವು ಎಲ್ಲಿಗೆ ಹೋಗಬೇಕು?. ಈವರೆಗೆ ನಾವು D1 ಡೆಪಾಸಿಟ್ ಕೊಟ್ಟರೆ ಬೋರ್ ಎಲ್ಲಿಯಾದರೂ ಇರಲಿ, ಕರೆಂಟ್ ಕೊಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಸಚಿವರು ಇವತ್ತು ಏನು ಹೇಳಿದ್ದಾರೆ, 20,000–00, 25,000–00, ಮೇಲೆ ಐದಾರು ಸಾವಿರ ಹೆಚ್ಚು ಕಡಿಮೆ ಇದ್ದರೆ ಕೊಡುತ್ತೇವೆ, ಇಲ್ಲದಿದ್ದರೆ ಆಗುವುದಿಲ್ಲವೆಂದು ಹೇಳಿದ್ದಾರೆ. ಹಾಗಾದರೆ ರೈತರಿಗೂ ಇದನ್ನೇ ಅನ್ವಯಿಸುತ್ತಿರಾ ನೀವು? ಎಲ್ಲರಿಗೂ ಇದೇ ಪಾಲಿಸಿ ಮಾಡುತ್ತಿರುವಿರಾ?

ಶ್ರೀ ಹೆಚ್.ಡಿ. ರೇವಣ್ಣ:– ಸರ್ಕಾರದಿಂದ one time ಎಂದು ಮಾಡುವುದಕ್ಕೆ ಎಷ್ಟು ಖರ್ಚಾದರೂ ಅದನ್ನು ಮಾಡುವುದಕ್ಕೆ ಸರ್ಕಾರ 25,000–00 ರೂ.ಗಳನ್ನು ರೈತರಿಂದ ಕಟ್ಟಿಸಿಕೊಳ್ಳುವುದು, ಬಾಕಿ ಉಳಿಕೆ ಹಣ ಸರ್ಕಾರ ಕೊಡುವುದು ಎನ್ನುವ ತೀರ್ಮಾನ ನೀವು ಇದ್ದಾಗಲೇ ಮಾಡಿದ್ದೀರಿ, ಹಾಗಾಗಿ ಹಣಕಾಸು ಇಲಾಖೆಯಿಂದ ಕೊಟ್ಟರೆ ಇದನ್ನು ಮಾಡಿಸುತ್ತೇವೆಂದು ಹೇಳುತ್ತಿದ್ದೇವೆ.

ಶ್ರೀ ಎಸ್.ಸಿದ್ಧರಾಮಯ್ಯ(ಚಾಮುಂಡೇಶ್ವರಿ):– ಅಧ್ಯಕ್ಷರೇ, ಈಗ ಎಸ್.ಸಿ/ಎಸ್.ಟಿ. ಜನಾಂಗದವರ ಗಂಗಾ ಕಲ್ಯಾಣ ಕಾರ್ಯಕ್ರಮದಲ್ಲಿ ಅದಕ್ಕೆ ಇಷ್ಟೇ ದುಡ್ಡು ಎಂದು ನಿಗದಿ ಮಾಡಿಲ್ಲ. Backward classes communityದು.... ಅದು highest ಆಗುತ್ತದೆ ಒಂದು ಲಕ್ಷ ರೂ.ಗಳೂ ಆಗಬಹುದು. ಕೇವಲ 12,000/– 15,000/– 25,000/–ದೊಳಗೆ ಇದೆ ಎಂದೇನಿಲ್ಲ. ಈಗ ಮಾಡಿಕೊಡುತ್ತಿರುವಂಥಾದ್ದು ಅವರಿಗೆ ಆರ್ಥಿಕವಾಗಿ ಶಕ್ತಿ ತುಂಬಬೇಕು ಎಂದು ಪುಕ್ಕಟೆಯಾಗಿ ನಾವು ಮಾಡಿಕೊಡಬೇಕೆಂಬುದೇ ಉದ್ದೇಶ. ಆ ಕಾರಣದಿಂದ ನೀವು ಎಸ್.ಸಿ.ಪಿ.ಯಲ್ಲಿ ಬರತಕ್ಕಂಥ ಹಣ, ಪೂಲ್ ಮಾಡತಕ್ಕಂಥ ಹಣ ಮತ್ತೆ ಟ್ರೈಬಲ್

ಪ್ಲಾನ್‌ನಿಂದ ಪೋಲ್ ಮಾಡತಕ್ಕಂಥ ಹಣದಿಂದ ಎಷ್ಟೇ ಹೆಚ್ಚಾದರೂ ಕೂಡ ಕೆ.ಇ.ಬಿ.ಯವರಿಗೆ ನೀವು ಕಟ್ಟಿಕೊಡಬೇಕು. You can't say, ಅದಕ್ಕಿಂತ ಹೆಚ್ಚಾಗಿ ಹಣ ಕೊಡಲಿಕ್ಕಾಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ ಅಥವಾ ಕೆ.ಇ.ಬಿಯವರು ಇಲ್ಲ, ಇಲ್ಲ, ಜಾಸ್ತಿಯಾಗಿಬಿಟ್ಟಿತ್ತು ಎಂದು ಹೇಳುವುದಕ್ಕಾಗುವುದಿಲ್ಲ. ಆ ತರಹದ್ದು ಇಲ್ಲವೇ ಇಲ್ಲ. ನೀವು ಎಷ್ಟಾದರೂ ಕೂಡ ಎಸ್.ಸಿ.ಪಿ.ಯಿಂದ ಕೊಡಬೇಕು. ಎಸ್.ಸಿ/ಎಸ್.ಟಿ. ಹಾಗೂ ಬಿ.ಸಿ.ಎಂ.ಸಿ.ಯವರಿಗೆ ನೀವೇ ತುಂಬಿಕೊಡಬೇಕಾಗುತ್ತದೆ. ಹಣ ಕೊಟ್ಟ ಮೇಲೆ ಕೆ.ಇ.ಬಿ.ಯವರು ಅದನ್ನು ಮಾಡಿಕೊಡಲೇಬೇಕಾಗುತ್ತದೆ. ನಾವು ಒಂದು ordinance ಕೂಡ ಇಷ್ಯೂ ಮಾಡಿದ್ದೆವು. ನೀವು ದುಡ್ಡು ಕಟ್ಟಲಿಲ್ಲವೆಂದು ಹೇಳಿ ತಡ ಮಾಡಬಾರದೆಂದು ಸಹ ಹೇಳಿದ್ದೇವೆ. ಅವರಿಂದ ಹಣ ವಸೂಲು ಮಾಡಿಕೊಳ್ಳಬೇಕೆಂದು ಹೇಳಿದ್ದೇವೆ. ಡಿಲೇ ಮಾಡಬಾರದೆಂದು, ಹಣ ವಸೂಲು ಮಾಡಿಕೊಳ್ಳಬೇಕೆಂದೂ ಸಹ ನೋಟಿಫಿಕೇಷನ್ ಆಗಿದೆ.

ಶ್ರೀ ಬಿ.ಶಿವರಾಂ:- ಮೊದಲು ಅದೇ ತರಹ ಇದ್ದಿದ್ದು, ಮೊದಲು ಸರ್ವೀಸ್ ಮಾಡಿದ ನಂತರ reimbursement ಇತ್ತು. ಈಗ reimbursement ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ:- ನಾನು ನಮ್ಮ ಇಲಾಖೆಯವರಿಗೆ ಹೇಳಿದ್ದೇನೆ. ಬೇಕಾದರೆ ಅವರು ಹಣವನ್ನು ಸ್ವಲ್ಪ ಲೇಟಾಗಿ ಕೊಟ್ಟರೂ ಪರವಾಗಿಲ್ಲ, ಏನಾದರೂ undertaking ಕೊಟ್ಟರೆ ನಾವು ಮಾಡಿಕೊಡಲಿಕ್ಕೂ ತಯಾರಿದ್ದೇವೆಂದು ಹೇಳಿದ್ದೇವೆ.

ಶ್ರೀ ಎಸ್.ಸಿದ್ಧರಾಮ್ಯ:- ಇವರು ಹಣ ಡಿಪಾಸಿಟ್ ಮಾಡಲಿಲ್ಲವೆಂದು K.E.B. need not wait. ಮತ್ತೆ ಅವರು ಇಷ್ಟೇ ಹಣ ಕೊಟ್ಟರು ಎಂದು ಹಾಗೇ ಇಟ್ಟುಕೊಳ್ಳುವ ಹಾಗಿಲ್ಲ. That is very very clear.

ಅಧ್ಯಕ್ಷರು:- ಸಿದ್ಧರಾಮಯ್ಯನವರೇ, ಈಗೇನಾಗಿದೆಯೆಂದರೆ, ಪ್ರಾಕ್ಟಿಕಲ್ ಆಗಿ ಹಣ ಇದ್ದರೆ ಅವರು ಕೆಲಸ ಮಾಡುತ್ತಾರೆ. ಎಲ್ಲಾ ಇಲಾಖೆಗಳಲ್ಲಿಯೂ ಅಷ್ಟೇ, ಆದ್ದರಿಂದ ಈಗ ಸಮಾಜ ಕಲ್ಯಾಣ ಇಲಾಖೆಯವರದೂ ಸಹ., ಪ್ರಶ್ನೆ ಏನಿದೆ, ಕೆಲವು ಕಡೆ 10, 15, 20 ಕಂಬಗಳು ಆಗಬೇಕಾಗುತ್ತದೆ. ಲಕ್ಷಾಂತರ ರೂಪಾಯಿಗಳು ಆಗುತ್ತದೆ, ಸಂದರ್ಭಗಳಲ್ಲಿ ಏನು ಮಾಡಬೇಕೆಂಬುದನ್ನು ಆ ಇಲಾಖೆಯವರು ಮತ್ತು ವಿದ್ಯುಚ್ಛಕ್ತಿ ಇಲಾಖೆಯವರು ಕುಳಿತು ಸರ್ಕಾರದವರೇನಾದರೂ ಒಂದು ನೀತಿಯನ್ನು ರೂಪಿಸಬೇಕು.

ಶ್ರೀ ಬಿ.ಶಿವರಾಂ:- ಅದಕ್ಕೆ ಸರ್ಕಾರ ಒಂದು ತೀರ್ಮಾನಕ್ಕೆ ಬರಬೇಕು. ಆ ತೀರ್ಮಾನಕ್ಕೆ ಬರದೇ ಹೋದರೆ ದುರ್ಬಲ ವರ್ಗದವರಿಗಾಗಿ ಮಾಡಿದಂಥ ಯೋಜನೆ ಅನುಷ್ಠಾನ ಎಲ್ಲಿ ಆಯಿತು? ಯಾವ ಫಲಾನುಭವಿಗಳಿಗೂ ಸರ್ವೀಸ್ ಆಗುವುದೇ ಇಲ್ಲ.

ಶ್ರೀ ಸಿದ್ದರಾಮಯ್ಯ:- ಸರ್ಕಾರ ಒಂದು ತೀರ್ಮಾನಕ್ಕೆ ಬರಬೇಕು. ಗಂಗಾ ಕಲ್ಯಾಣ ಯೋಜನೆಗೆ ಎಷ್ಟು ದುಡ್ಡು ಇಟ್ಟಿದ್ದಾರೆ. ಎಸ್.ಸಿ/ಎಸ್.ಟಿ.ಗೆ, ಬಿ.ಸಿ.ಎಂ.ಸಿ.ಗೆ ಎಷ್ಟು ದುಡ್ಡು ಇಟ್ಟಿದ್ದಾರೆ? ದುಡ್ಡಿನಲ್ಲಿ ನೀವು ಅವರಿಗೆ ಇಷ್ಟಕ್ಕೆ ಮಾಡಿಕೊಡುತ್ತೇವೆಂದು ಹೇಳಲಿಕ್ಕೆ ಬರುವುದಿಲ್ಲ, ಅವರು ಎಲ್ಲಿಂದ ದುಡ್ಡು ಕಟ್ಟುತ್ತಾರೆ? ಹಾಗಾಗಿ ಗಂಗಾ ಕಲ್ಯಾಣ ಕಾರ್ಯಕ್ರಮದ purpose defeat ಆಗಿಬಿಡುತ್ತದೆ.

ಶ್ರೀ ಬಿ.ಶಿವರಾಂ:- now it is totally defeated.

ಶ್ರೀ ಸಿದ್ದರಾಮಯ್ಯ:- ಬಡವರಿಗೋಸ್ಕರ ಮಾಡಿರುವಂಥ ಕಾರ್ಯಕ್ರಮವದು. ಅವರಿಗೆ ಸ್ವಲ್ಪ ಆರ್ಥಿಕವಾಗಿ ಶಕ್ತಿ ಬರಲಿ ಎನ್ನುವಂಥ ಕಾರಣಕ್ಕೆ ಮಾಡಿರುವಂಥ ಕಾರ್ಯಕ್ರಮವದು. ಅದ್ದರಿಂದ you can't put restrictions. ಮಾಡಬೇಕು. ನೀವು ಎಷ್ಟು ದುಡ್ಡು ತೆಗೆದುಕೊಳ್ಳುತ್ತೀರಿ ಅದರ ಮೇಲೆ ಅಷ್ಟು ಜನಕ್ಕೆ ಮಾಡಿಕೊಡಬೇಕು.

ಅಧ್ಯಕ್ಷರು:- ಈಗ ಆಯಿತು.

ಶ್ರೀ ಬಿ.ಶಿವರಾಂ:- ಸಚಿವರು ಉತ್ತರ ಹೇಳಲಿ, ಅವರು ಏನು ಮಾಡುತ್ತಾರೆಂಬ ತೀರ್ಮಾನ ಹೇಳಲಿ. ದುರ್ಬಲ ವರ್ಗದವರಿಗೆ ನಾವು ಬಾವಿ ಮಾಡಿ ಸರ್ವೀಸ್ ಕೊಡಿಸಲಿಲ್ಲ ನಾಲ್ಕು ವರ್ಷವಾದರೂ ಎಂದರೆ what is the use?

ಅಧ್ಯಕ್ಷರು:-Very very clear., ಆದರೂ ಕೂಡ ವಿದ್ಯುದ್ಧೀಕರಣ ಆಗುವುದಿಲ್ಲ. Very very clear, but Order is on the.... ಆ ರೀತಿ ಆಗಿದೆ. ಆದರೆ ಮಾತ್ರ ವಿದ್ಯುದೀಕರಣ ಆಗುವುದಿಲ್ಲ. ಆ ರೀತಿ ಆಗಿದೆ. No, no, ವಾಸ್ತವವಾಗಿ ಆ ರೀತಿ ನಡೆಯುತ್ತಿದೆ.

ಶ್ರೀ ಸಿದ್ದರಾಮಯ್ಯ:- ತಾವು ಹಾಗೆ ಹೇಳಿದರೆ ನಡೆಯುವುದೇ ಇಲ್ಲಾ ಅಮೇಲೆ. ನಡೆಯುತ್ತಿರುವುದು ಸರಿ, ಅದರೆ ನಡೆಸಬೇಕು. ಹಾಗೆ ನಡೆಸಲಿಕ್ಕೆ ನಿಮ್ಮ ಸಹಾಯವೂ ಬೇಕು.

ಅಧ್ಯಕ್ಷರು:- ಸರ್ಕಾರದ ಮಟ್ಟದಲ್ಲಿ ಬೇರೆ ಬೇರೆ ಇಲಾಖೆಗಳು ಸಮನ್ವಯ ಮಾಡಿ ನೀತಿಯನ್ನು ರೂಪಿಸುವುದನ್ನು ಮಾಡಬೇಕಾಗಿದೆ.

ಶ್ರೀ ಬಿ.ಶಿವರಾಂ:- ಅಧ್ಯಕ್ಷರೇ ಇಂಥ ಸಮಸ್ಯೆಗಳಿಗೆ ತಮ್ಮ ಪೀಠದಿಂದ ಆ ದುರ್ಬಲ ವರ್ಗದವರಿಗೆ ಪರಿಹಾರ ಸಿಗುವಂಥ ಕೆಲಸವಾಗಬೇಕು. ಇಂಥ ಸಮಸ್ಯೆಯನ್ನು ನೇರವಾಗಿ ಹೇಳುತ್ತಿರುವಾಗ ಪರಿಹಾರ ಕಂಡುಹಿಡಿಯದೇ ಹೋದರೆ ಉಪಯೋಗವೇನಾಯಿತು?

ಅಧ್ಯಕ್ಷರು:- ಪರಿಹಾರವನ್ನು ಕಂಡುಹಿಡಿಕೊಳ್ಳಬೇಕು ಸ್ವಾಮಿ, ಈಗ ಪರಿಹಾರವನ್ನು ಹೊಸದಾಗಿ ಕಂಡುಹಿಡಿದುಕೊಳ್ಳಬೇಕು. ಸುಮ್ಮನೆ ಮಾಡಿ ಎಂದರೆ ಮಾಡಲಿಕ್ಕಾಗುವುದಿಲ್ಲ.

ಶ್ರೀ ಬಾಲಚಂದ್ರ.ಲ.ಜಾರಕಿಹೊಳಿ(ಸಮಾಜ ಕಲ್ಯಾಣ ಸಚಿವರು):- ಸನ್ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಈ 14,000 ಬೋರ್‌ವೆಲ್‌ಗಳಿಗೆ ನಾವು ಡಿಪಾಸಿಟ್ ಹಣ 9.39 ಕೋಟಿ ರೂ.ಗಳನ್ನು ಕಟ್ಟಿದ್ದೇವೆಂದು ಹೇಳಿದ್ದೇನೆ. ಇವೆಲ್ಲವನ್ನು ಒಂದು ಅಂದಾಜಿನಲ್ಲಿ ತೆಗೆದು ನೋಡಿದಾಗ ಇವೆಲ್ಲಕ್ಕೂ ವಿದ್ಯುದೀಕರಣ ಆಗಬೇಕಾದರೆ ಒಟ್ಟು 183.00 ಕೋಟಿ ರೂಪಾಯಿಗಳು ಬೇಕಾಗುತ್ತದೆ.

ಶ್ರೀ ಎಸ್.ಸಿದ್ದರಾಮಯ್ಯ:-"ಖಜಾನೆಯಲ್ಲಿ ದುಡ್ಡು ತುಂಬಿ ತುಳುಕುತ್ತಿದೆ." ಹಣ ಪಡೆಯಿರಿ.

ಶ್ರೀ ಬಿ. ಶಿವರಾಂ:- ಈ 9.00 ಕೋಟಿ ಇದ್ದರೆ ಎಷ್ಟರಮಟ್ಟಿಗೆ ಬಡವರಿಗೆ ಸರ್ವೀಸ್ ಸಿಗುತ್ತದೆಂದು ಯೋಚನೆ ಮಾಡಿ.

ಶ್ರೀ ಬಾಲಚಂದ್ರ.ಲ.ಜಾರಕಿಹೊಳಿ:- ಶಿವರಾಂರವರೇ ಎಲ್ಲದಕ್ಕೂ ವಿದ್ಯುದ್ಧೀಕರಣ ಆಗಬೇಕೆಂದರೆ 183.00 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈಗಾಗಲೇ ಮಾನ್ಯ ಹಿರಿಯ ಸದಸ್ಯರಾದ ಸಿದ್ದರಾಮಯ್ಯನವರು ಒಂದು ಪೂಲ್ ಮಾಡಿಕೊಳ್ಳಿ ಎಂದು ಹೇಳಿದರು. ಅವರು ಹೇಳಿದಂತೆ ಪೂಲ್ ಮಾಡಿದರೆ ಬೇರೆ ಬೇರೆ ಕೆಲಸಗಳಿಗೂ ಖರ್ಚು ಮಾಡಬೇಕಾಗುತ್ತದೆ. ಎಲ್ಲಾದಕ್ಕೂ ಮಾಡಲಿಕ್ಕಾಗುವುದಿಲ್ಲ.

ಶ್ರೀ ಎಸ್.ಸಿದ್ದರಾಮಯ್ಯ: This is priority. Priority ಕೊಡಬೇಕಾಗಿರುವುದು ಗಂಗಾ ಕಲ್ಯಾಣ, ಮನೆ ಕಟ್ಟಿಕೊಡುವಂಥಾದ್ದು, ಅವರಿಗೆ ಜಮೀನು ತೆಗೆದುಕೊಡುವಂಥಾದ್ದು, ಜೊತೆಗೆ ಎಜುಕೇಷನ್ These three are priority programmes. ಅದಕ್ಕೆ ನೀವು ಪ್ರಯಾರಿಟಿ ಕೊಡಬೇಕು. ಬೇರೆಯೆಲ್ಲಾ ಆಮೇಲೆ.

ಶ್ರೀ ಬಿ.ಶಿವರಾಂ:- ಆ ಟಾರ್ಗೆಟ್ ಅನ್ನು ಅಚೀವ್ ಮಾಡದಿದ್ದರೆ...

ಶ್ರೀ ಬಾಲಚಂದ್ರ.ಲ.ಜಾರಕಿಹೊಳಿ:- ಈಗ final ಆಗಿ ಒಂದು conclusionಗೆ ಬರೋಣ. ಇದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಮಾನ್ಯ ಇಂಧನ ಸಚಿವರು ಎಲ್ಲಾ ಸೇರಿ ಒಂದು ಸಭೆ ನಡೆಸಿ ಈ ದಿಡ್ಡನ್ನು ಕೊಡಿ ಎಂದು ಕೇಳುತ್ತೇನೆ, extra ಹಣ ಕೊಟ್ಟರೆ ಖಂಡಿತ ಮಾಡುತ್ತೇನೆ. ನಾನು ಪೂಲ್‌ನಲ್ಲಿ ಹಣ ಕೊಡಲಿಕ್ಕೆ ಬರುವುದಿಲ್ಲ. ಪೂಲ್‌ನಲ್ಲಿ ಬೇರೆ ಬೇರೆ ಕೆಲಸ ಮಾಡಬೇಕು. ಹಾಸ್ಟೆಲ್, ಕಟ್ಟಡಗಳನ್ನು ಕಟ್ಟಬೇಕಾಗಿದೆ. ಹಾಗಾಗಿ ನಾನು ಪೂಲ್ ಫಂಡ್ ಹಣದಲ್ಲಿ ಕೊಡುವುದಿಲ್ಲ. ಬೇರೆ ದುಡ್ಡನ್ನು ಹಣಕಾಸು ಇಲಾಖೆಯವರಿಗೆ ಕೇಳುತ್ತೇನೆ, ಹಣ ಕೊಟ್ಟರೆ ಖಂಡಿತ ಈ ಕೆಲಸವನ್ನು ಮಾಡುತ್ತೇನೆ.

ಶ್ರೀ ಬಿ. ಶಿವರಾಂ:- ಇಲಾಖೆಯವರು ಕೊಟ್ಟರೆ ಮಾಡುತ್ತೇನೆ, ಇಲ್ಲದಿದ್ದರೆ ಇಲ್ಲ ಎನ್ನುತ್ತಾರೆ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:– ಅಲ್ಲ, ಸೋಷಿಯಲ್ ಸೆಕ್ಟರ್‌ನಲ್ಲಿ ನೀವು ಸಮಾಜ ಕಲ್ಯಾಣ ಸಚಿವರಾಗಿ ಬಡವರಿಗೆ ಬಾವಿ ತೆಗೆಯಲಿಕ್ಕೆ ಹಣ ಕೊಡುವುದಿಲ್ಲವೆಂದರೆ ಏನರ್ಥ ಅದು.

(ಗೊಂದಲ)

ಶ್ರೀ ಬಿ.ಶಿವರಾಂ:– ಗಂಗಾ ಕಲ್ಯಾಣ ಯೋಜನೆಯಲ್ಲಿ...

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:– ಬಜೆಟ್ಟಿನಲ್ಲಿ ಬೊಬ್ಬೆ ಹಾಕುತ್ತಿದ್ದಾರೆ ನಾವು ಅಷ್ಟು ಕೊಡುತ್ತಿದ್ದೇವೆ, ಇಷ್ಟು ಕೊಡುತ್ತಿದ್ದೇವೆಂದು ಹೇಳಿ.

ಶ್ರೀ ಬಾಲಚಂದ್ರ.ಲ.ಜಾರಕಿಹೊಳಿ:– ನಾನು ಅದಕ್ಕೋಸ್ಕರವೇ ಮೀಟಿಂಗ್ ಮಾಡಿ ಕನ್‌ವಿನ್ಸ್ ಮಾಡಿ ಅವರಿಂದ ಹಣ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು: ಆಯಿತು, ಈಗ ಅವರು ಪ್ರಯತ್ನ ಮಾಡುತ್ತೇನೆಂದು ಹೇಳುತ್ತಿದ್ದಾರೆ, ದಯಮಾಡಿ ಸಿದ್ದರಾಮಯ್ಯನವರೇ, ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ:ಳ– ಆ ರೀತಿ ಉತ್ತರ ಕೊಟ್ಟುಬಿಟ್ಟರೆ ಗಂಗಾ ಕಲ್ಯಾಣದಲ್ಲಿ ಒಂದೂ ವಿದ್ಯುದ್ದೀಕರಣವಾಗುವುದಿಲ್ಲ ಆಮೇಲೆ, ಹೇಳಿಬಿಡುತ್ತೇನೆ, ದಯವಿಟ್ಟು ಮಂತ್ರಿಗಳೇ ನನ್ನ ಮಾತು ಕೇಳಿ. ಅವರು ಹಣ ಕೊಟ್ಟರೆ ಮಾಡುತ್ತೇನೆಂದು ಹೇಳಲಿಕ್ಕೆ ಹೋಗಬೇಡಿ. ನಿಮಗೆ ಗಂಗಾ ಕಲ್ಯಾಣ ಯೋಜನೆಗೆ ಬಜೆಟ್ಟಿನಲ್ಲಿ ಎಷ್ಟು ದುಡ್ಡು provide ಮಾಡಿದ್ದಾರೆ. ನೀವು on going worksಗೆ ಎಷ್ಟು ಬಾಕಿ ಉಳಿದಿವೆ ಅದಕ್ಕೆಲ್ಲಾ ದುಡ್ಡು ಕೊಡುವುದು ಬೇಡವೇ? ಕೊಡಬೇಕಾದರೆ, ಏಕೆಂದರೆ ಅವರು ಹೇಳುತ್ತಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಗಂಗಾ ಕಲ್ಯಾಣ ಯೋಜನೆಯಲ್ಲಿ ಒಂದು ಲಕ್ಷ ಇಟ್ಟಿರುವುದರಲ್ಲಿ ಲೈನಿಗೆ ಕೊಡುವ ದುಡ್ಡನ್ನು ಯಾರೂ ಇಟ್ಟಿಲ್ಲ. energise ಮಾಡುವ ಡೆಪಾಸಿಟ್, ಪಂಪ್ ಸೆಟ್ ಅದಕ್ಕೆ ಮಾತ್ರ ಇಟ್ಟಿರುವುದು. ಈ ರಾಜ್ಯದ ಪಾಲಿಸಿ ಇದ್ದುದು ಈ ರೈತರ ಯಾವುದೇ ಐ.ಪಿ.ಸೆಟ್‌ಗೆ ಉಚಿತವಾಗಿ ಕಂಬ ಹಾಕಿ ತಂತಿ ಹೆಣೆದುಕೊಡುತ್ತೇವೆಂದು. ಇವತ್ತು minister ಒಂದು dangerous statement ಮಾಡಿದರು, ಇಷ್ಟು ಹಣದೊಳಗೆ ಇದ್ದರೆ ನಾನು ಮಾಡುತ್ತೇನೆಂದರು, ಅವರು ಹೇಳಿದ್ದನ್ನು ಕೇಳಿಲ್ಲ. ನೀವು ಎಲ್ಲೋ ಹೋಗಿಬಿಟ್ಟಿರಿ, ಇದು ಕೇವಲ ಎಸ್.ಸಿ, ಎಸ್.ಸಿ.ಪಿ.ಗೆ ಅನ್ವಯವಾಗುತ್ತದೆಂದು ಈ ಸಭೆ ಭಾವಿಸಲಿಕ್ಕೆ ಬರುವುದಿಲ್ಲ. ಇಲ್ಲಿಂದ ಮುಂದೆ ರೈತರೆಲ್ಲಾದರೂ ಬೋರ್‌ವೆಲ್ ಹಾಕಿದ್ದರೆ estimate is limited, ಅದರ ಮೇಲೆ ನಾವು ಮಾಡುವುದಿಲ್ಲವೆಂದು ಅವರ ಉತ್ತರದಿಂದ ಈಗ ನಾವು ಭಾವಿಸಬೇಕಾಗಿದೆ.

ಅಧ್ಯಕ್ಷರು:- ಈ ಚರ್ಚೆ ಇನ್ನೂ ಎಲ್ಲಿಯವರೆಗೆ ಮುಂದುವರೆಸುತ್ತೀರಿ, ಆಯಿತು ಈಗ ಚರ್ಚೆ ಎಲ್ಲಿಯವರೆಗೆ ಮಾಡುತ್ತೀರಿ ಹೇಳಿ ಅಲ್ಲಿಯವರೆಗೆ ಸಮಯ ಕೊಟ್ಟುಬಿಡುತ್ತೇನೆ. No,no, ಎಲ್ಲದಕ್ಕೂ ಒಂದು ಮಿತಿ ಬೇಕು. ಗಂಟೆಗಟ್ಟಲೆ ಚರ್ಚೆ ಮಾಡಿದರೆ ಹೇಗೆ?

ಶ್ರೀ ಜೆ.ಸಿ.ಮಾಧುಸ್ವಾಮಿ:- ಚರ್ಚೆಯಲ್ಲ, ಅವರು ಹೇಳಿದ ಉತ್ತರ ಹಾಗಿದೆ.

(ಗೊಂದಲ)

ಶ್ರೀ ಎಸ್.ರಾಜೇಂದ್ರನ್:- ನೀವು ಅದರ ಮೇಲೆ ಚಿಂತನೆ ಮಾಡಿ ಉತ್ತರ ಕೊಡಿ. ಪವರ್ ಮಿನಿಸ್ಟರ್ ಇದ್ದಾರೆ, ಸಮಾಜ ಕಲ್ಯಾಣ ಮಿನಿಸ್ಟರ್ ಇದ್ದಾರೆ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ:- ಕೆ.ಇ.ಬಿ.ಯಲ್ಲಿ ಐ.ಪಿ.ಸೆಟ್‌ಗೆ ಕನೆಕ್ಷನ್ ಕೊಡುವಾಗ ಕಂಬ ತಂತಿ ಎಸ್ಟಿಮೇಟ್ ಅನ್ನು ಇಷ್ಟಕ್ಕೆ ಮಾತ್ರ ಲಿಮಿಟ್ ಮಾಡುತ್ತೇವೆ ಎನ್ನುವುದನ್ನು ಮೊದಲನೇ ಸಲ ಇಲ್ಲಿ ಹೇಳಿದ್ದಾರೆ, that is not correct. ಕರೆಂಟ್ ಅನ್ನು ಎಷ್ಟು ದೂರವಾದರೂ ತಾವು ಉಚಿತವಾಗಿಯೇ ಕೊಡಬೇಕು. ಅವರು ಹೇಳಬೇಕಲ್ಲವೇ, ಉಚಿತವಾಗಿ ಐ.ಪಿ.ಸೆಟ್‌ಗೆ ಕರೆಂಟ್ ಅನ್ನು ಕೊಡಬೇಕು. ನಾವು ಡೆಪಾಸಿಟ್ ಅನ್ನು ಒಂದು ಹೆಚ್.ಪಿ.ಗೆ 820-00 ರೂ.ಗಳನ್ನು ಕಟ್ಟಿದರೆ, ಲೈನ್ ಎಸ್ಟಿಮೇಟ್‌ಗೆ ರೈತರು ಅಥವಾ ಎಸ್.ಸಿ/ಎಸ್.ಟಿ. beneficiaries ಕಟ್ಟಲಿಕ್ಕಾಗುತ್ತದೆಯೇ? He wants line estimate cost.

ಅಧ್ಯಕ್ಷರು:- ಈಗ ಆಯಿತು, ಅವರು ಉತ್ತರ ಹೇಳಿದ್ದಾರಲ್ಲಾ ಮಾಧುಸ್ವಾಮಿ, ಪ್ರಯತ್ನ ಮಾಡುತ್ತೇನೆ ಎಂದು. ಸಮಸ್ಯೆಗಳೆಲ್ಲಾ ಇವೆ. ಸಮನ್ವಯ ಸಾಧಿಸಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದಾರೆ, ಇನ್ನೇನು ಹೇಳಲಿಕ್ಕೆ ಸಾಧ್ಯ?

ಈಗ ಗುರುಪಾದಪ್ಪ ನಾಗಮಾರಪಲ್ಲಿಯವರೇ ನೀವು ರಾಯರೆಡ್ಡಿಯವರ ಪರವಾಗಿ ಕೇಳುತ್ತೀರಾ, ಇಲ್ಲವೇ? ಕೇಳಿ.

ಶ್ರೀ ಬಿ.ಶಿವರಾಂ:- ಪ್ರಶ್ನೆ ಕೇಳುವ ಅವಶ್ಯಕತೆಯೇ ಇಲ್ಲ, ಈ ರೀತಿ ಉತ್ತರ ಹೇಳುವುದಾದರೆ.

ಅಧ್ಯಕ್ಷರು:- ಈಗ ಅವರು ಉತ್ತರ ಹೇಳಿದ್ದಾರೆ, ಮತ್ತೆ,ಮತ್ತೆ ನೀವು ಉತ್ತರ ಹೇಳಿ ಎಂದರೆ ಅವರು ಅಷ್ಟೇ ಹೇಳುವುದು.

ಶ್ರೀ ಎಸ್. ಮಲ್ಲಿಕಾರ್ಜುನ ಖರ್ಗೆ:- ಈ ಪ್ರಶ್ನೆಯನ್ನು ಹಣಕಾಸು ಸಚಿವರು ಮತ್ತು ರೇವಣ್ಣನವರು ಉತ್ತರಿಸಬೇಕಾಗಿದೆ. ಹಣಕಾಸು ಸಚಿವರೇ ನಿಮ್ಮ ಊಟಕ್ಕೆ ಎಲ್ಲರೂ ಬರುತ್ತಾರೆ, ನಿಮ್ಮ ಪರವಾಗಿ ಎಲ್ಲರಿಗೂ ನಾನು request ಮಾಡುತ್ತೇನೆ including Chairman, ತಾವು ಈಗ ಇಲ್ಲಿ ಕುಳಿತು ಸ್ವಲ್ಪ ನಮ್ಮ ಮಾತನ್ನು ಕೇಳಬೇಕು. ಏನೆಂದರೆ ಬಾಲಚಂದ್ರರವರು ಈಗಾಗಲೇ ನಮ್ಮ ಹತ್ತಿರ ಹಣವಿಲ್ಲ, ಹಣ ಅವರು ಕೊಟ್ಟರೆ ನಾವು ಮಾಡುತ್ತೇವೆ, ಇಲ್ಲದಿದ್ದರೆ ಇಲ್ಲವೆಂದು ಹೇಳುತ್ತಿದ್ದಾರೆ.

ನಾವು ಯಾವ ರೀತಿಯಾಗಿ ಬೇರೆ ರೈತರಿಗೆ ಮುಕ್ಕಟೆಯಾಗಿ ಕೊಡುತ್ತಿದ್ದೇವೆ, ಗಂಗಾ ಕಲ್ಯಾಣ ಯೋಜನೆಯನ್ನೂ ಕೂಡ ಅದೇರೀತಿಯಾಗಿ ಮುಕ್ಕಟೆ ಮಾಡಿಕೊಡುವಂಥ ವ್ಯವಸ್ಥೆ ಇದೆ, ಆದರೆ ಈಗ ರೇವಣ್ಣನವರು ಏನು ಹೇಳುತ್ತಾರೆ, ಇಲ್ಲ, within estimated cost ನಲ್ಲಿದ್ದರೆ ಮಾತ್ರ ನಾವು ಅದನ್ನು ಮಾಡುತ್ತೇವೆ. ಇಲ್ಲದಿದ್ದರೆ ಇಲ್ಲ ಎಂದು ಅಂದರೆ ಗಂಗಾ ಕಲ್ಯಾಣ ಯೋಜನೆ ಪ್ರಯೋಜನವಿಲ್ಲ. ಏಕೆಂದರೆ ನೀವು ಬರೇ ಬೋರ್‌ವೆಲ್ ಹಾಕಿ ಅವರ ಹತ್ತಿರ ಕಮಿಷನ್ ತೆಗೆದುಕೊಂಡು ಅಷ್ಟನ್ನು ಮಾತ್ರ ಮಾಡಿ ಬಿಟ್ಟರೆ ಮುಗಿಯುತ್ತದೆಯೇ? ನೀವು ಲೈನ್ ಕೊಟ್ಟು ಪಂಪಸೆಟ್ ಹಾಕಿ ಅವರಿಗೆ workable ಮಾಡಿ ಕೊಟ್ಟರೆ ಮಾತ್ರ ಅದು ಸಾಧ್ಯವಿದೆ. ಹಾಗಾದರೆ, ರೇವಣ್ಣನವರಿಗೆ ಸ್ಪೆಷಲ್ ಕಾಂಪೋನೆಂಟ್ ಪ್ಲಾನ್‌ನಲ್ಲಿ ಕೋಟ್ಯಾಂತರ ರೂಪಾಯಿಗಳು ಅವರಲ್ಲಿಂದಲೇ ಬರಬೇಕೆ? ಹಾಗಾದರೆ ಸಾವಿರಾರು ಕೋಟಿ ರೂಪಾಯಿಗಳನ್ನು ಅವರೇ ಕೊಡಬೇಕಾಗುತ್ತದೆ, ಈಗಾಗಲೇ five year plan ನಲ್ಲಿ ನಿಗದಿ ಪಡಿಸಿದ್ದಾರೆ. 24% ಹಣವನ್ನು ನೀವು ಅವರಿಗೆ ರಿಸರ್ವ್ ಇಡಬೇಕೆನ್ನುವುದೂ ಇದೆ, ಇಲ್ಲದಿದ್ದರೆ ನಿಮ್ಮ ಜನರಲ್ ಬಜೆಟ್‌ನಲ್ಲಿ ನಾವು ಕಟ್ ಮಾಡುತ್ತೇವೆಂದು ಹೇಳಿದ್ದಾರೆ. ಪ್ಲಾನಿಂಗ್ ಕಮಿಷನ್‌ನವರು ಹೇಳಿದ್ದಾರೆ. ನೀವು ಒಂದು ವೇಳೆ ಮಾಡದೇಹೋದರೆ ನಾಳೆ ಕಂಪ್ಲೇಂಟ್ ಮಾಡಬೇಕಾಗುತ್ತದೆ, ಮತ್ತೆ ಅಲ್ಲಿಂದ ನೀವು ತೊಂದರೆಗೆ ಒಳಗಾಗಿ ಇಡೀ ರಾಜ್ಯದ ರೈತರು ತೊಂದರೆಗೊಳಗಾಗುತ್ತಾರೆ. ಅದಕ್ಕೇ ಅದನ್ನು ಸರಿಪಡಿಸತಕ್ಕಂಥದ್ದನ್ನು ಮಾಡಿ. ಯಡಿಯೂರಪ್ಪನವರೇ, ಈಗ ಲಖನೌದಲ್ಲಿ ತುಮ್ ಪಹಲೇ, ಎನ್ನುವ ಹಾಗೆ ಅವರು ಹೇಳುತ್ತಾರೆಂದು ಇವರು, ಇವರು ಹೇಳುತ್ತಾರೆಂದು ಅವರು ಮಾಡುತ್ತಿದ್ದರೆ ಅಷ್ಟರಲ್ಲಿ ಗಾಡಿ ಮುಂದೆ ಹೋಗಿರುತ್ತದೆ.

(ಗೊಂದಲ)

ಡಾ.ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಇದಕ್ಕೆ ಸಮಾಜ ಕಲ್ಯಾಣ ಸಚಿವರು ಉತ್ತರಿಸಬೇಕಿಲ್ಲ, ಇಂಧನ ಸಚಿವರು ಅಥವಾ ಉಪಮುಖ್ಯಮಂತ್ರಿಗಳು ಉತ್ತರ ಹೇಳಬೇಕು.

ಅಧ್ಯಕ್ಷರು:– ಆಯಿತು, ಏನಾಗಿದೆಯೆಂದರೆ ಒಂದು ಸೀಮಿತವಾಗಿ ಚರ್ಚೆ ಮಾಡಬೇಕು, ಅದು ಬಿಟ್ಟು ಒಂದೇ ಪ್ರಶ್ನೆಗೆ ಗಂಟೆಗಟ್ಟಲೆ ಚರ್ಚೆ ಮಾಡಿದರೆ ಹೇಗೆ? ಹೇಳಿ.

ಶ್ರೀ ಎಸ್.ಮಲ್ಲಿಕಾರ್ಜುನ ಖರ್ಗೆ:– ಈ ಸಮಸ್ಯೆ ಇಲ್ಲಿ ಬಗೆಹರಿಯಲಿಲ್ಲವೆಂದರೆ ಎಲ್ಲಿ ಬಗೆಹರಿಯಬೇಕು ಹೇಳಿ.

(ಗೊಂದಲ)

ಅಧ್ಯಕ್ಷರು:– ಈ ಸಮಸ್ಯೆ ಇಲ್ಲೇ ಬಗೆಹರಿಯಬೇಕು, ಆದರೆ ನೀವು ಬೇರೆ ರೀತಿಯಲ್ಲಿ ಸೂಚನೆ ಕೊಟ್ಟರೆ extensive ಆಗಿ ಅದರ ಬಗ್ಗೆ ಚರ್ಚೆ ಮಾಡಿ ಅದೇನು ಅವರಿಗೆ ಉತ್ತರ ಹೇಳಿ, ನನ್ನ ಅಭ್ಯಂತರವೇನಿಲ್ಲ.

ಶ್ರೀ ಎಸ್.ಮಲ್ಲಿಕಾರ್ಜುನ ಖರ್ಗೆ: ನಾವು ಎಲ್ಲಿ ಪರಿಹಾರ ಕಾಣಬೇಕು?

ಅಧ್ಯಕ್ಷರು:– ಪರಿಹಾರ ಇಲ್ಲೆ ಕಾಣಬೇಕು, ಸಚಿವರು ಅದಕ್ಕೆ ಉತ್ತರಿಸಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ, ಆದರೆ ಒಂದು ಪ್ರಶ್ನೆಗೆ ಗಂಟೆಗಟ್ಟಲೆ ಚರ್ಚೆಯಾದರೆ ಹೇಗೆ?

ಶ್ರೀ ಎಸ್. ಮಲ್ಲಿಕಾರ್ಜುನ ಖರ್ಗೆ:– ಗಂಟೆಗಟ್ಟಲೆ ಎನ್ನುವ ಪ್ರಶ್ನೆ ಅಲ್ಲ, ಸಮಸ್ಯೆಗೆ ಪರಿಹಾರ ಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಸರ್ಕಾರದಿಂದ ನೀವು ಉತ್ತರ ಕೊಡಿಸಬೇಕು

(ಗೊಂದಲ)

ಶ್ರೀ ಬಿ.ಶಿವರಾಂ:– ಇದು ಬಹಳ ಗಂಭೀರವಾದಂಥ ಪ್ರಶ್ನೆ. 5–6 ವರ್ಷಗಳಿಂದ ಸರ್ವೀಸ್ ಆಗಿಲ್ಲವೆನ್ನುವುದು ಒಂದು ಸಮಸ್ಯೆಯಲ್ಲವೇ?

ಅಧ್ಯಕ್ಷರು:– ಹೇಳಿ ರೇವಣ್ಣನವರೇ, ನೀವು ಏನು ಮಾಡಲಿಕ್ಕೆ ಸಾಧ್ಯವೆನ್ನುವುದನ್ನು ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ:– ಅಧ್ಯಕ್ಷರೇ, ಇದು ಇವತ್ತಿನಿಂದ ಇರುವ ಸಮಸ್ಯೆಯಲ್ಲ, ಇದು ಮುಗಿಯುವಂತಹ ಕೆಲಸವಲ್ಲ. ಕಳೆದ ನಾಲ್ಕು ವರ್ಷಗಳಿಂದ 2000ನೇ ಇಸವಿಯಿಂದ ಹಾಗೇ ಇತ್ತು. 1999ನೇ ಇಸವಿಯಿಂದ ನಡೆಯುತ್ತಿದೆ, 31.12.2006ರವರೆಗೆ ಸುಮಾರು 8,000 ಅರ್ಜಿ ಹಾಗೆ ಪೆಂಡಿಂಗ್ ಬಿದ್ದಿತ್ತು, ನಾವು ಬಂದ ಮೇಲೆ at least 74% achive ಮಾಡಿ ಕೆಲಸವನ್ನು ಮಾಡಿಸಿದ್ದೇವೆ. ಇವತ್ತು ಬಾಲಚಂದ್ರ ಜಾರಕಿಹೊಳಿಯವರಿಗೆ ನಾವೇ ಅಭಿನಂದನೆಯನ್ನು ಸಲ್ಲಿಸಬೇಕು. ಏಕೆಂದರೆ ನಾಲ್ಕು ವರ್ಷಗಳಿಂದ ಆಸಕ್ತಿಯೇ ವಹಿಸಿರಲಿಲ್ಲ, ನಾವೇನು ಬೇಡವೆಂದು ಹೇಳಿದ್ದೆವೆ? 1999–2004ರವರೆಗೆ ಏನು ಮಾಡಿದ್ದಾರೆಂದು ಹೇಳಲಿ? ಎಷ್ಟು ಬೋರ್‌ವೆಲ್‌ಗಳಿಗೆ ಐ.ಪಿ.ಸೆಟ್ ಕನೆಕ್ಷನ್ ಕೊಟ್ಟಿದ್ದಾರೆಂದು ಹೇಳಲಿ, ಏತಕ್ಕೆ 4 ವರ್ಷಗಳಿಂದ ಕನೆಕ್ಷನ್ ಕೊಟ್ಟಿರಲಿಲ್ಲ? ಇವತ್ತು ಎಸ್.ಸಿ./ಎಸ್.ಟಿ ಸಮಾಜದ ಬಗ್ಗೆ ಮಾತನಾಡುವವರು 5 ವರ್ಷ ಏತಕ್ಕೆ ಮಾಡಲಿಲ್ಲವೆನ್ನುವುದನ್ನು ದಯಮಾಡಿ ಹೇಳಲಿ.

ಶ್ರೀ ಎಸ್.ಮಲ್ಲಿಕಾರ್ಜುನ ಖರ್ಗೆ:– ಕೊಟ್ಟಿಲ್ಲವೆಂದರೆ ಎಲ್ಲೆಲ್ಲಿ ಕೊಟ್ಟಿಲ್ಲ ಹುಡುಕಿ ಹೇಳೋಣ. ಪ್ರಶ್ನೆ ಈಗ ಬಂದಿದೆ, ನಿಮ್ಮಲ್ಲಿ ಅಧಿಕಾರವಿದೆ.

(ಗೊಂದಲ)

ಶ್ರೀ ಬಿ.ಶಿವರಾಂ:– ಇದು 2002–03 ರಿಂದ ಬಾಕಿ ಇರುವುದೇ ಹೊರತು, ಹಿಂದಿನದ್ದಲ್ಲ, ಇಲ್ಲೇ ಮಾಹಿತಿ ಇದೆ.

ಅಧ್ಯಕ್ಷರು:– ನೀವು ಮಾಹಿತಿ ಇದೆಯೆಂದು ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ:– ಸ್ವಾಮಿ, ಇಲ್ಲೇ ಕಡತದಲ್ಲಿ ಉತ್ತರ ಕೊಟ್ಟಿದ್ದಾರೆ, ನಮ್ಮ ಇಲಾಖೆಯಿಂದಲೂ ಮಾಹಿತಿ ತರಿಸಿದ್ದೇನೆ. ಎರಡೂ ಕಡೆ ತರಿಸಿಟ್ಟಿದ್ದೀನಿ.

2000ನೇ ಇಸವಿಯಿಂದ ಇವತ್ತಿನವರೆಗೆ ಸುಮಾರು 8,000 ಅರ್ಜಿಗಳು ಪೆಂಡಿಂಗ್ ಇತ್ತು. ಅದನ್ನು ನಾನು ಬಂದ ಮೇಲೆ 74% ಅಚೀವ್ ಮಾಡಿದ್ದೇನೆ. ಇವತ್ತು ನಾನು ನಮ್ಮ ಇಲಾಖಾಧಿಕಾರಿಗಳಿಗೂ ಹೇಳಿದ್ದೇನೆ, ಯಾವುದೇ ಜಿಲ್ಲೆಯಲ್ಲಿ ಅವರು undertaking ಕೊಟ್ಟರೆ, ಅವರು ದುಡ್ಡು ಬೇಕಾದರೆ ನಿಧಾನವಾಗಿಯೇ ಕೊಡಲಿ, undertaking ಕೊಟ್ಟರೆ ನಾನು ಕೆಲಸ ಮಾಡಿಸಿಕೊಡುತ್ತೇನೆ. ಏಕೆಂದರೆ ಖರ್ಗೆಸಾಹೇಬರಿಗೆ ವಿಷಯ ಗೊತ್ತಿದೆ, ಈಗ ಕೆ.ಇ.ಆರ್.ಸಿ. ಎಂದು ನಾಲ್ಕು ಕಂಪೆನಿಗಳ ಮೇಲೆ ಒಂದು ಐದನೇ ಕಂಪನಿಯನ್ನು ಇಟ್ಟಿದ್ದೇವೆ.

ಶ್ರೀ ಎಸ್.ಮಲ್ಲಿಕಾರ್ಜುನ ಖರ್ಗೆ:- ಹೌದು, ನೀವು ಅವರಿಗೆ ಪುಕ್ಕಟೆ ನೀರು ಕೊಡುತ್ತೇವೆಂದು ಹೇಳಿ ಪೈಪ್‌ಲೈನ್ ಹಾಕಿಕೊಡುತ್ತೇವೆಂದು ಹೇಳಿ ಅವರಿಗೆ undertakingಗೆ ದುಡ್ಡು ತುಂಬಿ ಎಂದು ಹೇಳಿದರೆ ಅವರು ಎಲ್ಲಿಂದ ಹಣ ತುಂಬುತ್ತಾರೆ?

ಶ್ರೀ ಹೆಚ್.ಡಿ.ರೇವಣ್ಣ:- ಅವರು ಹಣ ಕೊಡದಿದ್ದರೆ ನಾನು ಏನು ಮಾಡಬೇಕು?

ಶ್ರೀ ಎಸ್.ಮಲ್ಲಿಕಾರ್ಜುನ ಖರ್ಗೆ:- ಎಲ್ಲಿಂದಲಾದರೂ ನೀವು find out ಮಾಡಬೇಕು. ಇಲ್ಲವೇ ಎಸ್.ಸಿ.ಪಿ. ಅಮೌಂಟ್‌ನಿಂದಲಾದರೂ ಹಣ ತುಂಬಬೇಕು. ಇಲ್ಲವೇ ಬಜೆಟ್‌ನಲ್ಲಿಯಾದರೂ ಪ್ರಾವಿಷನ್ ಮಾಡಬೇಕು. ಎಲ್ಲಿಂದ ಮಾಡಬೇಕೆಂದರೆ ಏನರ್ಥ?

ಡಾ.ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ನಿಮ್ಮ ಇಲಾಖೆಗೆ ಅಲೋಕೇಷನ್‌ನಲ್ಲಿ 25% ಇದೆ, ಅದನ್ನು ತೆಗೆದಿಡಿ.

ಶ್ರೀ ಹೆಚ್.ಡಿ.ರೇವಣ್ಣ:- ಸ್ವಲ್ಪ ಕುಳಿತುಕೊಳ್ಳಿ, ಹೇಳುತ್ತೇನೆ. ಈಗ ಕೆ.ಇ.ಬಿ.ಯಲ್ಲಿ ಏನು ನಡೆದಿದೆ ಎಂಬುದನ್ನು ಹೇಳಬೇಕಾಗಿದೆ, ಒಂದು ದಿವಸ ಚರ್ಚೆಯಡಿ, ಬೇಕಾದರೆ ಹೇಳಲಿಕ್ಕೆ ರೆಡಿಯಿದ್ದೇನೆ, ಕೆ.ಇ.ಬಿ. ಬಗ್ಗೆ ಒಂದು ದಿವಸ ಚರ್ಚೆಯಿಡಿ, ನಾನು ಅವತ್ತಿನಿಂದ ಕೇಳುತ್ತಿದ್ದೇನೆ. ಏನೇನು ನಡೆದಿದೆಯೆಂಬುದರ ಬಗ್ಗೆ ಹೇಳುತ್ತೇನೆ. ನಾನೇನು ಹೆದರಿಕೊಂಡು ಓಡಿಹೋಗುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೇ, ಇದು ಸುಮ್ಮನೆ ಚರ್ಚೆಯಾಗುತ್ತಿದೆ.

ಶ್ರೀ ಸಿದ್ದರಾಮ್ಮಯ್ಯ:- ಗಂಗಾ ಕಲ್ಯಾಣ ಕಾರ್ಯಕ್ರಮಗಳಿಗೆ ಹಣ ನೀಡಲು ನೀವು ರೆಡಿಯಿದ್ದೀರಿ, ಅದು ಬೇರೆ, not that you are confined to only your department. It is a Government. It is a joint reponsibility of every body. ಎಲ್ಲರದೂ ಜಂಟಿ ಜವಾಬ್ದಾರಿ ಇದೆ, ನನ್ನ ಇಲಾಖೆಗೆ ಹಣ ಕೊಟ್ಟರೆ ನಾನು ಮಾಡುತ್ತೇನೆ, ನನ್ನ ಇಲಾಖೆಗೆ ಹಣ ಕೊಡದಿದ್ದರೆ ನಾನು ಮಾಡುವುದಿಲ್ಲವೆಂದು ಹೇಳುವುದಲ್ಲ.,

ಅಧ್ಯಕ್ಷರು:– ಅದು ವಾಸ್ತವ.

ಶ್ರೀ ಸಿದ್ದರಾಮಯ್ಯ:– ಸರ್ಕಾರದ ಪಾಲಿಸಿ ಏನು, ನೀತಿ ಏನು? Policy is ಗಂಗಾ ಕಲ್ಯಾಣದಲ್ಲಿ ಪುಕ್ಕಟೆಯಾಗಿ ಅವರಿಗೆ electrification ಮಾಡಿಕೊಡಬೇಕು, ಪಂಪ್ ಸೆಟ್ ಹಾಕಿಕೊಡಬೇಕೆಂಬುದು ಪಾಲಿಸಿ. ಅದು ಆದಮೇಲೆ ನನಗೆ ದುಡ್ಡು ಕೊಟ್ಟಿಲ್ಲವೆಂದು ಸಮಾಜಕಲ್ಯಾಣ ಇಲಾಖಾ ಸಚಿವರು ಹೇಳುವುದು, ನನಗೆ ದುಡ್ಡು ಕೊಟ್ಟರೆ ನಾನು ಮಾಡುತ್ತೇನೆಂದು ಹೇಳುವುದು. ನಾನು ನನ್ನ ಇಲಾಖೆಯಲ್ಲಿ ಚೆನ್ನಾಗಿ ಮಾಡಿದ್ದೇನೆ, ಆದರೆ ದುಡ್ಡು ಕೊಟ್ಟಿಲ್ಲ ನಾನೇನು ಮಾಡಲಿ ಎಂದು ಹೇಳಿದರೆ that is not the reply wanted by the member or by the House. ಈ ಸದನ ಕೇಳುವುದು ಏನೆಂದರೆ, ನಾವು ಕುಳಿತು ತೀರ್ಮಾನ ಮಾಡಿ ಅದನ್ನು ಮಾಡಿಸುತ್ತೇವೆಂದು ಹೇಳಿದರೆ ಅದಕ್ಕೆ ಒಂದು ಅರ್ಥ ಬರುತ್ತದೆ. ಅದು ಬಿಟ್ಟು ಇಲ್ಲ ನಮಲ್ಲಿ ದುಡ್ಡಿಲ್ಲ, ನಾವು ಮಾಡುವುದಿಲ್ಲ, ದುಡ್ಡು ಕೊಟ್ಟರೆ ನಾನು ಮಾಡುತ್ತೇನೆ ಎನ್ನುವುದು ಎಂದು ಸರ್ಕಾರ ಹೇಳಕೊಡದು, Power Minister, Social welfare Minister, Financial Minister ಜೊತೆ ಕುಳಿತು ತೀರ್ಮಾನ ಮಾಡಿ ಅದನ್ನು ಇತ್ಯರ್ಥ ಮಾಡಬೇಕು.

ಅಧ್ಯಕ್ಷರು:– ಹೌದು, ಇತ್ಯರ್ಥ ಮಾಡಬೇಕು.

ಶ್ರೀ ಎಸ್.ಎಸ್.ಪಾಟೀಲ್:– ಚರ್ಚೆ ಎಂದರೆ ಅಂಕಿ ಸಂಖ್ಯೆ ಸರಿಯಾಗಿಲ್ಲದಿರುವುದರಿಂದ ಈ ಚರ್ಚೆ ನಡೆದಿದೆ. ನಾನು ಹೇಳುವುದಕ್ಕೆ ಬಿಡಿ ನೀವು.

(ಗೊಂದಲ)

ಅಧ್ಯಕ್ಷರು:– ಮಂತ್ರಿಗಳನ್ನು ಬಿಟ್ಟು ನಿಮ್ಮ ನಿಮ್ಮಲ್ಲೇ ಚರ್ಚೆಯಾದರೆ ಹೇಗೆ?

ಶ್ರೀ ಎಸ್.ಎಸ್.ಪಾಟೀಲ್:– ನಾನು ಪೂರ್ಣವಾಗಿ ಮಾತನಾಡುವವರೆಗೆ ಕೇಳಿ.

(ಗೊಂದಲ)

ಅಧ್ಯಕ್ಷರು:– ಈಗ ಶಿವರಾಂ, ಒಂದು ಸೂಚನೆ ಕಳುಹಿಸಿ, ಚರ್ಚೆಗೆ ಅವಕಾಶ ಕೊಡುತ್ತೇನೆ. ಸದನದಲ್ಲಿ ವ್ಯಾಪಕವಾಗಿ ಚರ್ಚೆಯಾಗಲಿ, ಆಗ ಸಮನ್ವಯ ಸಾಧಿಸಲಿಕ್ಕೆ ಮುಖ್ಯಮಂತ್ರಿಗಳು ಅಥವಾ ಉಪ ಮುಖ್ಯಮಂತ್ರಿಗಳು ಉತ್ತರಕೊಡಲಿ.

ಶ್ರೀ ಎಸ್.ಎಸ್.ಪಾಟೀಲ್:– ಅಧ್ಯಕ್ಷರೇ, ಮುಂದೆ ಸರ್ಕಾರವೇ ಹಣ ತುಂಬುತ್ತಿತ್ತು. ನಡುವೆ ಏನಾಯಿತು ಎಂದರೆ ಫಲಾನುಭವಿಗಳು ಹಣ ಕಟ್ಟಬೇಕೆಂದರು, ಆ ಕಾರಣದಿಂದ ಫಲಾನುಭವಿಗಳು ಹಣ ಕಟ್ಟಲಿಲ್ಲ.

(ಗೊಂದಲ)

ಶ್ರೀ ಬಿ.ಶಿವರಾಂ:– ತಪ್ಪು ರೆಕಾರ್ಡ್‌ಗೆ ಹೋಗಬಾರದು. ನಿಮ್ಮ ಪ್ರಾಜೆಕ್ಟನಲ್ಲಿ ವೈಯಕ್ತಿಕ ಗಂಗಾ ಕಲ್ಯಾಣಕ್ಕೆ ಮಾತ್ರ 25,000–00 ಮಾತ್ರ ಎಂದು ಹೇಳಿದ್ದಾರೆ,

that means, ಹಿಂದೆ free ಆಗಿತ್ತು ಎಂದು ಹೇಳಿ, ಈಗ 25,000/- ತುಂಬಬೇಕೆಂದು ಹೇಳಿದ ಮೇಲೆ, ಅವನು ತುಂಬಿದ ಮೇಲೆ ಪೂರ್ತಿಯಾಗಿ ಕೊಡಬೇಕು ತಾನೆ? ಎಸ್ಟಿಮೇಟೆಡ್ ಕಾಸ್ಟ್ 2.00 ಲಕ್ಷ ರೂ.ಗಳಿರಬಹುದು. ತುಂಬಬೇಕೋ ಬೇಡವೋ?

ಶ್ರೀ ಎಸ್.ಎಸ್.ಪಾಟೀಲ್:- ಸರ್ಕಾರ ಕೆ.ಇ.ಬಿ.ರೊಕ್ಕ ತುಂಬದಿದ್ದರೆ ನಿಲ್ಲುವುದಿಲ್ಲ.

ಅಧ್ಯಕ್ಷರು:- ಈಗ ಶಿವರಾಂ, ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು ಅಷ್ಟೇ ತಾನೇ? ಅದಕ್ಕೆ ಸಚಿವರು ಉತ್ತರ ಹೇಳಿದ್ದಾರೆ, ರೇವಣ್ಣನವರು ಉತ್ತರಿಸಿದ್ದಾರೆ, ಇದರ ಬಗ್ಗೆ ಇನ್ನೂ ಚರ್ಚೆಯಾಗುವುದಿದ್ದರೆ ಒಂದು ಸೂಚನೆ ಕಳುಹಿಸಿ, ನಾನು ಚರ್ಚೆಗೆ ಅವಕಾಶ ಕೊಡುತ್ತೇನೆ. ಚರ್ಚೆ ಮಾಡಿ ಒಂದು ಪರಿಹಾರವನ್ನು ಕಂಡಕೊಳ್ಳೋಣ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ:- ಈಗ ಎಲ್ಲಾ ಹಿರಿಯ ಸದಸ್ಯರಿಗೂ 183.00 ಕೋಟಿ ರೂ.ಗಳ ಹಣವನ್ನು ನಾನು ಹೇಳಿದ್ದೇನೆ, ನಾನೇತಕ್ಕೆ ಹೇಳಿದ್ದೇನೆಂದರೆ ಸದನಕ್ಕೆ ಸುಳ್ಳು ಹೇಳಬಾರದು ಎಂದು ಹೇಳಿದ್ದೇನೆ. ಏಕೆಂದರೆ ನಾನು ಎಲ್ಲಾ ಮಾಡುತ್ತೇನೆಂದು ಹೇಳಿ ಮಾಡದಿದ್ದರೆ ಹೌಸ್‌ನಲ್ಲಿ ರೆಕಾರ್ಡ್ ಆಗುತ್ತದೆ ಅದು ನಿಜ ಹೇಳಿದ್ದೇನೆ. ಹಣ ಕೊಟ್ಟರೆ ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಜೆ.ಸಿಮಾಧುಸ್ವಾಮಿ:- ಸರ್ ನೀವು ಸ್ವಲ್ಪ ಈಲ್ಡ್ ಆಗಿ, ಲೈನ್ ಕಾಸ್ಟ್ ಇವತ್ತಿನವರೆಗೂ ಯಾರು ತುಂಬಿಲ್ಲ. ಯಾರೂ ತುಂಬುವ ಅಗತ್ಯವಿರಲಿಲ್ಲ, ಎಲ್ಲಿಗೆ ಚರ್ಚೆಯನ್ನು ತೆಗೆದುಕೊಂಡು ಹೋಗುತ್ತಿದ್ದೀರಿ. ದಯಮಾಡಿ ಕೇಳಬೇಕು. ರಾಜ್ಯದಲ್ಲಿ ಎನರ್ಜಿ ಇಲಾಖೆಗೆ ದುಡ್ಡು ಇಡಬೇಕಾದರೆ ಎಷ್ಟು ವೈಡ್ ತಾಲ್ಲೂಕು ಇದೆ, ಎಷ್ಟು ಟಾರ್ಗೆಟ್ ಇದೆ? 69,000 ದಿಂದ 70,000 ಐ.ಪಿ.ಸೆಟ್ ಟಾರ್ಗೆಟ್ ಇದೆ, ಅದನ್ನೆಲ್ಲಾ ಲೆಕ್ಕ ಮಾಡಿ ಬಜೆಟ್ ಕೊಡಬೇಕು. ಎಲ್ಲಾ ರೈತರಿಗೆ he may be SC/ST or he may be other farmers. ಲೈನ್ ಕೆಲಸ ಮಾಡುವುದು, ಟ್ರಾನ್ಸ ಫಾರ್ಮರ್ಸ್ ಹಾಕಿ ಕೊಡುವುದು ಇವರ ಕೆಲಸ, ಮಾನ್ಯ ರೇವಣ್ಣನವರು ಇವತ್ತು ಅದಕ್ಕೆ ವಿರುದ್ಧವಾಗಿ ಮಾತನಾಡುತ್ತಿದ್ದಾರೆ. ನಾನು ಇಷ್ಟು ಎಸ್ಟಿಮೇಟ್‌ನೊಳಗೆ ಮಾತ್ರ ಮಾಡುತ್ತೇನೆಂದು ಹೇಳುತ್ತಿದ್ದಾರೆ. ನಿಮ್ಮದು confined to deposit and K.E.B. Department at office. ಇವತ್ತು ಚರ್ಚೆ ಪ್ರಾರಂಭ ಮಾಡಿರುವುದು ನಾವು ಲೈನ್ ಎಸ್ಟಿಮೇಟ್ ಜಾಸ್ತಿಯಾಗುತ್ತದೆ, ನಾವು ಕೊಡುವುದಕ್ಕಾಗುವುದಿಲ್ಲವೆನ್ನುತ್ತಾರೆ. ನೂರಕ್ಕೆ ನೂರು ಅವರದೇ ಜವಾಬ್ದಾರಿ.

ಶ್ರೀ ಜೆ ಸಿ ಮಾಧುಸ್ವಾಮಿ: ಲೈನ್ ಎಳೆದು ಕೊಡಬೇಕಾದ್ದು ತಮ್ಮ ಕೆಲಸ, IP setಗಳಿಗೆ ಕರೆಂಟ್ ಕೊಡಲು ಎಷ್ಟು ದೂರ ಮಾತ್ರ ಎಳೆಯುತ್ತೇವೆ ಅಂತ ಅವರು

ಹೇಳೋಕಾಗೋಲ್ಲ. Budget is meant for it. ಈ ಕೆಲಸ ತಾವೇ ಮಾಡಬೇಕು ಅಂತ ಒತ್ತಾಯ ಮಾಡುತ್ತೇವೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು

ಚುಕ್ಕೆ ಗುರುತಿನ ಪ್ರಶ್ನೆ : 240(1321)
ಸದಸ್ಯರ ಹೆಸರು :ಶ್ರೀಬಸವರಾಜ್‌ರಾಯರೆಡ್ಡಿ (ಯಲಬುರ್ಗಾ)
ಉತ್ತರಿಸಬೇಕಾದ ದಿನಾಂಕ : 22.03.2007
ವಿಷಯ : ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು
ಸಚಿವರ ಹೆಸರು ಮತ್ತು ಪದನಾಮ ಶ್ರೀ ಬಾಲಚಂದ್ರ ಲ.ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) 2006-07ನೇ ಸಾಲಿನಲ್ಲಿ ಮಂಜೂರಾದ ಮೆಟ್ರಿಕ್-ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಎಷ್ಟು ಹಾಗೂ ಯಾವ ಯಾವ ಜಿಲ್ಲೆಗಳಿಗೆ ಮಂಜೂರಾಗಿದೆ?

1. ಸಮಾಜ ಕಲ್ಯಾಣ ಇಲಾಖೆ:

2006-07ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 44 ಮೆಟ್ರಿಕ್ ಪೂರ್ವ ಹಾಗೂ 7 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಮಂಜೂರಾಗಿವೆ.

2. ಹಿಂದುಳಿದ ವರ್ಗಗಳ ಇಲಾಖೆ:

2006-07ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ 33 ಮೆಟ್ರಿಕ್ ಪೂರ್ವ ಹಾಗೂ 19 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಮಂಜೂರಾಗಿವೆ.

3. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

2006-07ನೇ ಸಾಲಿನಲ್ಲಿ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗಾಗಿ 9 ಮೆಟ್ರಿಕ್ ಪೂರ್ವ ಹಾಗೂ 15 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಮಂಜೂರಾಗಿವೆ.

ವಿವರಗಳನ್ನು ಅನುಬಂಧ-Aರಲ್ಲಿ ನೀಡಲಾಗಿದೆ.

ಆ) 2006ರ ಡಿಸೆಂಬರ್‌ವರೆಗೆ ಇವುಗಳಲ್ಲಿ ಕಾರ್ಯನಿರತವಾದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು: ಇವುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ?

1. ಸಮಾಜ ಕಲ್ಯಾಣ ಇಲಾಖೆ:

ಮಂಜೂರಾಗಿರುವ 51 ವಿದ್ಯಾರ್ಥಿನಿಲಯಗಳಲ್ಲಿ ಡಿಸೆಂಬರ್ 2006ರವರೆಗೆ 39 ವಿದ್ಯಾರ್ಥಿನಿಲಯಗಳು ಕಾರ್ಯನಿರತವಾಗಿರುತ್ತವೆ. ಈ ವಿದ್ಯಾರ್ಥಿನಿಲಯಗಳು